ಸಂಪುಟ: 01 ಸಂಚಿಕೆ: 104 ಪುಟ: 04 ಬೆಲೆ: 02 ಬುಧವಾರ ಸೆಪ್ಟೆಂಬರ್ 30 2026 ಮೊ: 7411699198/7406928404

# ಅಜಾತ ಶತ್ರು

ಪ್ರದೀಪಕುಮಾರ
ಸಂಪಾದಕರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...
ಕನ್ನಡ ದಿನ ಪತ್ರಿಕೆ




Volume:01 Issue: 104 Pages:04 Price:02 WEDNESDAY SEPTEMBER 30 2026 RNI NO: KNKAN/26/A4008 E-mail:ajathashathru2026@gmail.com

## ಸತ್ಯವಾಣಿ ಕಟೋಕ್ತಿ

ಹೊಲಕೆ ಕಟ್ಟಿದ ಬೆಚ್ಚುಗಳೆಲ್ಲವೂ ಕಳ್ಳನ ಇರುವಿಕೆಯನ್ನು ಸಾಬೀತು ಪಡಿಸಲು ಸದ್ದು ಮಾಡಿದಾಗಲೆಲ್ಲ ಬೇಲಿ ಸುಮ್ಮನಿದ್ದರೇ,ಬೇಲಿ ಮತ್ತು ಕಳ್ಳನ ಬಾಂದವ್ಯದ ಗಟ್ಟಿತನವನ್ನು ಸೂಚ್ಯವಾಗಿ ದೃಡಪಡಿಸುತ್ತದೆ.



ವಾಣಿ ಭಂಡಾರಿ.

# ಮೋದಿ ರಾಜೀನಾಮೆಗೆ "ಕೈ" ಪಟ್ಟು



**ನವದೆಹಲಿ: ಮತದಾರರ ಪಟ್ಟಿ ಮತ್ತು ಚುನಾವಣಾ ಪ್ರಕ್ರಿಯೆಯಲ್ಲಿನ ಅಕ್ರಮ ಆರೋಪಗಳಿಗೆ ಸಂಬಂಧಿಸಿದಂತೆ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್‌ರನ್ನು ತಕ್ಷಣವೇ ಹುದ್ದೆಯಿಂದ ವಜಾ ಮಾಡಬೇಕು. ಚುನಾವಣಾ ಆಯೋಗದ ಮುಖ್ಯಸ್ಥರ ಮೇಲೆ ಒತ್ತಡ ಹೇರಿದ ಆರೋಪದ ಮೇಲೆ ಪ್ರಧಾನಿ ನರೇಂದ್ರ ಮೋದಿ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಗ್ರಹಿಸಿದ್ದಾರೆ.**

ದೆಹಲಿಯಲ್ಲಿ ಪಕ್ಷದ ಕಚೇರಿಯಲ್ಲಿ ಇಂದು ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಮತದಾರರ ಪಟ್ಟಿ ಮತ್ತು ಚುನಾವಣಾ ಪ್ರಕ್ರಿಯೆಯಲ್ಲಿನ ಅಕ್ರಮ ಆರೋಪಗಳಿಗೆ ಸಂಬಂಧಿಸಿದ ವಿಷಯಗಳನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಲಾಗುವುದು.ಈ ಬಗ್ಗೆ ಕಾಂಗ್ರೆಸ್ ಬೀದಿಗಿಳಿದು ಹೋರಾಟ ನಡೆಸಲಿದೆ ಎಂದು ತಿಳಿಸಿದ್ದಾರೆ. ಸಿಡಬ್ಲ್ಯೂಸಿ ಸಭೆಯಲ್ಲಿ ಖರ್ಗೆ ಐದು ಪ್ರಮುಖ ಬೇಡಿಕೆಗಳನ್ನು ಮಂಡಿಸಿದ್ದಾರೆ. ಮತದಾರರ ಪಟ್ಟಿಯಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಸಾರ್ವಜನಿಕಗೊಳಿಸಬೇಕು, ಹೆಸರುಗಳನ್ನು ಕೈಬಿಡಲಾದ ಮತದಾರರಿಗೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಬೇಕು ಮತ್ತು ಎಲ್ಲಾ ರಾಜಕೀಯ ಪಕ್ಷಗಳಿಗೆ ಸರಳ ಸ್ವರೂಪದ ಮತದಾರರ ಪಟ್ಟಿಯನ್ನು ಸಮಯಕ್ಕೆ ಸರಿಯಾಗಿ ಒದಗಿಸಬೇಕು ಎಂದು ಹೇಳಿದರು.

ಗಂಭೀರ ಲೋಪದೋಷಗಳು ಕಂಡುಬಂದ ಕಡೆಗಳಲ್ಲಿ ಸ್ವತಂತ್ರ ಹಾಗೂ ನಿರ್ದಿಷ್ಟ ಕಾಲಮಿತಿಯ ತನಿಖೆ ನಡೆಸಬೇಕು ಮತ್ತು ಮಾಹಿತಿಯನ್ನು ಮುಚ್ಚಿಡಲಾಗುತ್ತಿದೆ ಎಂಬ ಭಾವನೆ ಬಾರದಂತೆ ಚುನಾವಣಾ ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸಬೇಕು ಎಂದು ಆಗ್ರಹಿಸಿದರು ಇಬ್ಬರು ಚುನಾವಣಾ ಆಯುಕ್ತರೇ ಸಿಇಸಿ ಅವರ ಕ್ರಮಗಳನ್ನು ಸ್ವೇಚ್ಛಾಚಾರದ ಮತ್ತು ಅಸಮಂಜಸ ನಿರ್ಧಾರ ಎಂದು ಕರೆದಿದ್ದಾರೆ.

> "ಕೇಂದ್ರ ಮುಖ್ಯ ಚುನಾವಣಾ ಆಯುಕ್ತರ ಮೇಲೆ ಒತ್ತಡ ಹೇರಿದ ಕಾರಣಕ್ಕಾಗಿ ಪ್ರಧಾನ ಮಂತ್ರಿ ಮೋದಿ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಹೇಳಿದರು. ಮತದಾರರ ಪಟ್ಟಿಯಲ್ಲಿ ಪಾರದರ್ಶಕತೆ ಇರಬೇಕು ಮತ್ತು ಚುನಾವಣಾ ಪ್ರಕ್ರಿಯೆಯು ನಿಷ್ಪಕ್ಷಪಾತವಾಗಿರಬೇಕು ಎಂದು ನಾವು ಸಿಡಬ್ಲ್ಯೂಸಿ ಸಭೆಯಲ್ಲಿ ಪ್ರತಿಜ್ಞೆ ಮಾಡಬೇಕು. ಸಂಸ್ಥೆಗಳು ಸ್ವತಂತ್ರವಾಗಿರಬೇಕು ಮತ್ತು ಪ್ರತಿಯೊಬ್ಬ ಭಾರತೀಯನ ಮತವನ್ನು ರಕ್ಷಿಸಬೇಕು ಎಂದರು

ಅವರು ಆಡಳಿತಾರೂಢ ಪಕ್ಷಕ್ಕೆ ಸಹಾಯ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂಬುದು ಈಗ ಇಡೀ ದೇಶಕ್ಕೆ ತಿಳಿದಿದೆ. ಇಂತಹ ಪರಿಸ್ಥಿತಿಯಲ್ಲಿ ಆ ಹುದ್ದೆಯಲ್ಲಿ ಮುಂದುವರಿಯುವ ಹಕ್ಕು ಅವರಿಗಿಲ್ಲ ಮತ್ತು ಅವರನ್ನು ತಕ್ಷಣವೇ ತೆಗೆದುಹಾಕಬೇಕು ಎಂದು ಒತ್ತಾಯಿಸಿದರು.

ಕೇಂದ್ರಮುಖ್ಯಚುನಾವಣಾ ಆಯುಕ್ತರ ಮೇಲೆ ಒತ್ತಡ ಹೇರಿದ ಕಾರಣಕ್ಕಾಗಿ ಪ್ರಧಾನ ಮಂತ್ರಿ

2ನೇ ಪುಟಕ್ಕೆ

## ತಮಿಳುನಾಡಿನಲ್ಲಿ ಖಾಸಗಿ ಬಸ್ ಮಾಲೀಕರ ಮುಷ್ಕರ

ಅ.ಶ. ಸುದ್ದಿ ಚೆನ್ನೈ

**ಚೆನ್ನೈ: ಪ್ರಯಾಣ ದರ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ತಮಿಳುನಾಡಿನ ಖಾಸಗಿ ಬಸ್‌ಗಳ ಮಾಲೀಕರು ಸೆ.29ರ ಮಧ್ಯರಾತ್ರಿಯಿಂದ 24 ಗಂಟೆಗಳ ಸಾಂಕೇತಿಕ ಮುಷ್ಕರ ನಡೆಸಲು ನಿರ್ಧರಿಸಿದ್ದಾರೆ.**



ಚೆನ್ನೈ, ಮದುರೈ, ನಾಗರ್‌ಕೋಯಿಲ್ ಮತ್ತು ಊಟಿಯ ಖಾಸಗಿ ಬಸ್‌ಗಳು ಮುಷ್ಕರದಿಂದ ಹೊರಗುಳಿಯಲಿವೆ. ತಮಿಳುನಾಡು ಬಸ್ ಆಪರೇಟರ್‌ಗಳ ಒಕ್ಕೂಟದ ಪ್ರಕಾರ ರಾಜ್ಯದಲ್ಲಿ ಸುಮಾರು 7,000 ಖಾಸಗಿ ಬಸ್‌ಗಳು ಸಂಚರಿಸುತ್ತಿವೆ. ಡೀಸೆಲ್ ಹಾಗೂ ಬಿಡಿಭಾಗಗಳ ಬೆಲೆ ಏರಿಕೆಯಿಂದ ಖಾಸಗಿ ಬಸ್‌ಗಳ ನಿರ್ವಹಣೆ ಕಷ್ಟಕರವಾಗಿದೆ. 2018ರಲ್ಲಿ ಡೀಸೆಲ್ ದರ ಲೀಟರ್‌ಗೆ 64 ಇದ್ದಾಗ ಪ್ರಯಾಣ ದರವನ್ನು ಕೊನೆಯದಾಗಿ ಪರಿಷ್ಕರಿಸಲಾಗಿತ್ತು. ಇದೀಗ ಡೀಸೆಲ್ ಬೆಲೆ 100ಕ್ಕಿಂತ ಹೆಚ್ಚಾಗಿದೆ. ಪ್ರಸ್ತುತ ಸುಮಾರು ಶೇ.65ರಷ್ಟು ನಷ್ಟದಲ್ಲಿ ಬಸ್‌ಗಳನ್ನು ನಿರ್ವಹಿಸಲಾಗುತ್ತಿದೆ. ಪ್ರಯಾಣ ದರ ಪರಿಷ್ಕರಿಸದಿದ್ದರೆ ಖಾಸಗಿ ಬಸ್‌ಗಳ ವಲಯ ಅಸ್ತಿತ್ವ ಕಳೆದುಕೊಳ್ಳಲಿದೆ ಎಂದು ಒಕ್ಕೂಟದ ಅಧ್ಯಕ್ಷ ತಂಗರಾಜ್ ತಿಳಿಸಿದ್ದಾರೆ. ಪ್ರಯಾಣ ದರ ಪರಿಷ್ಕರಣೆ ಕುರಿತು ಕಳೆದ ವರ್ಷ ಮಾರ್ಚ್‌ನಲ್ಲಿ ಮದ್ರಾಸ್ ಹೈಕೋರ್ಟ್ ಸರ್ಕಾರಕ್ಕೆ ಬಸ್ ನಿರ್ವಾಹಕರು ಹಾಗೂ ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸುವಂತೆ ಸೂಚಿಸಿತ್ತು. ಆದರೆ ಬಳಿಕ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಖಾಸಗಿ ಬಸ್ ಮಾಲೀಕರು ಆರೋಪಿಸಿದ್ದಾರೆ. ಅಕ್ಟೋಬರ್ 2ರಿಂದ ವಿಸ್ತರಿಸಲು ಉದ್ದೇಶಿಸಿರುವ ಮಹಿಳೆಯರ ಉಚಿತ ಪ್ರಯಾಣ ಯೋಜನೆಗೂ ಖಾಸಗಿ ಬಸ್ ಮಾಲೀಕರು ವಿರೋಧ ವ್ಯಕ್ತಪಡಿಸಿದ್ದಾರೆ.

# KPSC ಭ್ರಷ್ಟಾಚಾರ ತನಿಖೆಗೆ CBI ಆಗ್ರಹಿಸಿ ಚಡಚಣದಲ್ಲಿ ಉಪವಾಸ ಸತ್ಯಾಗ್ರಹ



ಅ.ಶ. ಸುದ್ದಿ ಚಡಚಣ

**ಚಡಚಣ: KPSC ನೇಮಕಾತಿ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾಗುತ್ತಿರುವ ಅಕ್ರಮಗಳು ಹಾಗೂ ಭ್ರಷ್ಟಾಚಾರದ ಆರೋಪಗಳ ಕುರಿತು ಸಮಗ್ರ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಆಗ್ರಹಿಸಿ ಚಡಚಣದಲ್ಲಿ ಮಂಗಳವಾರ ಉಪವಾಸ ಸತ್ಯಾಗ್ರಹ ನಡೆಸಲಾಯಿತು.**

ಶಂಕರನಾಗ್ ಸರ್ಕಲ್ ಬಸ್ ನಿಲ್ದಾಣದ ಎದುರು ನಡೆದ ಉಪವಾಸ ಸತ್ಯಾಗ್ರಹದಲ್ಲಿ ವಿದ್ಯಾರ್ಥಿಗಳು, ಯುವಕರು ಹಾಗೂ ಸಾರ್ವಜನಿಕರು ಭಾಗವಹಿಸಿ, ಏಕಖಅ ನೇಮಕಾತಿ ಪ್ರಕ್ರಿಯೆಯಲ್ಲಿನ ಆರೋಪಗಳ ಸಂಪೂರ್ಣ ಸತ್ಯ ಹೊರಬರಬೇಕು ಎಂದು ಒತ್ತಾಯಿಸಿದರು. ಏಕಖಅ ಪ್ರಕರಣವನ್ನು ಅಃಖ ತನಿಖೆಗೆ ವಹಿಸಬೇಕು, ನೇಮಕಾತಿ ಅಕ್ರಮಗಳ ಸಂಪೂರ್ಣ ತನಿಖೆ ನಡೆಸಬೇಕು, ತಪ್ಪಿತಸ್ಥರು ಯಾರೇ ಆಗಿದ್ದರೂ ಕಾನೂನುಬದ್ಧ ಕ್ರಮ ಕೈಗೊಳ್ಳಬೇಕು ಹಾಗೂ ಅರ್ಹ ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಬೇಕು ಎಂಬ ಪ್ರಮುಖ ಬೇಡಿಕೆಗಳನ್ನು ಮುಂದಿಡಲಾಯಿತು. ಇತ್ತೀಚೆಗೆ ಕರ್ನಾಟಕ ಹೈಕೋರ್ಟ್ ಏಕಖಅ ನೇಮಕಾತಿ ಅಕ್ರಮಗಳ ಕುರಿತು ಹೊಸ ಐದು ಸದಸ್ಯರ ವಿಶೇಷ ಅಃಖ ತನಿಖಾ ತಂಡ ರಚಿಸಿ ತನಿಖೆ ನಡೆಸುವಂತೆ ನಿರ್ದೇಶಿಸಿದೆ.

ತನಿಖೆಯ ವ್ಯಾಪ್ತಿಯನ್ನು ಏಕ-ಖಅಯ ವಿವಿಧ ನೇಮಕಾತಿ ಪರೀಕ್ಷೆಗಳಿಗೂ ವಿಸ್ತ-ರಿಸುವ ಸಾಧ್ಯತೆಯ ಕುರಿತು ವರದಿಯಾಗಿದೆ. ಈ ಹಿನ್ನೆಲೆಯಲ್ಲಿ ಏಕಖಅ ಪ್ರಕರಣವನ್ನು ಮತ್ತಷ್ಟು ಸಮಗ್ರವಾಗಿ ಪರಿಶೀಲಿಸಿ, ಅಭ್ಯರ್ಥಿಗಳಲ್ಲಿ ಸಂಪೂರ್ಣ ವಿಶ್ವಾಸ ಮೂಡಿಸುವ ರೀತಿಯಲ್ಲಿ ತನಿಖೆ ನಡೆಯಬೇಕು ಎಂದು ಚಡಚಣದ ಪ್ರತಿಭಟನಾಕಾರರು ಆಗ್ರಹಿಸಿದರು. "ಸರ್ಕಾರಿ ಉದ್ಯೋಗವು ಹಣ ಅಥ-ವಾ ಪ್ರಭಾವದ ಆಧಾರದ ಮೇಲೆ ಸಿಗಬಾರದು. ಅರ್ಹತೆ ಮತ್ತು ಪಾರದರ್ಶಕತೆಯೇ ನೇಮಕಾತಿಯ ಆಧಾರವಾಗಬೇಕು.

KPSC ವ್ಯವಸ್ಥೆಯ ಮೇಲಿನ ವಿದ್ಯಾರ್ಥಿಗಳ ಮತ್ತು ಯುವಜನರ ವಿಶ್ವಾಸವನ್ನು ಮರುಸ್ಥಾಪಿಸಲು ನಿಷ್ಪಕ್ಷಪಾತ ತನಿಖೆ ಅಗತ್ಯ" ಎಂದು ಪಕ್ಷದ ಮುಖಂಡರು ಒತ್ತಾಯಿಸಿದರು. ಉಪವಾಸ ಸತ್ಯಾಗ್ರಹದ ಮೂಲಕ ಸರ್ಕಾರಕ್ಕೆ ತಮ್ಮ ಬೇಡಿಕೆಗಳನ್ನು ತಲುಪಿಸುವ ಪ್ರಯತ್ನ ಮಾಡಲಾಯಿತು.

ಏಕಖಅ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿದ್ದರೆ, ಅದರ ಹಿಂದೆ ಇರುವ ಪ್ರತಿಯೊಬ್ಬರ ಪಾತ್ರವನ್ನು ಕಾನೂನುಬದ್ಧವಾಗಿ ತನಿಖೆಗೊಳಪಡಿಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂಬ ಒತ್ತಾಯವೂ ಕೇಳಿಬಂತು. ವಿದ್ಯಾರ್ಥಿಗಳ ಭವಿಷ್ಯ ಮತ್ತು ಸರ್ಕಾರಿ ನೇಮಕಾತಿಗಳ ಮೇಲಿನ ಸಾರ್ವಜನಿಕ ವಿಶ್ವಾಸದ ದೃಷ್ಟಿಯಿಂದ ಏಕಖಅ ಪ್ರಕರಣದ ತನಿಖೆ ಪಾರದರ್ಶಕವಾಗಿ ನಡೆಯಬೇಕು ಎಂಬುದು ಪ್ರತಿಭಟನಾಕಾರರ ಪ್ರಮುಖ ಆಗ್ರಹವಾಗಿದೆ.

ಈ ಸಂದರ್ಭದಲ್ಲಿದಲ್ಲಿ ಗಣಪತಿ ರಾಠೋಡ್, ದೀಪಾ ಮನೂರ,ದ್ಯಾವಣ್ಣ ನಾಯಕ, ಅಶೋಕ್ ಜಾಧವ, ಚಂದ್ರಕಾಂತ ನಗರೆ, ನಾಭಿರಸೂಲ್ ಜಮಾಧಾರ, ನಾಗೇಶ ಸರಸಂಬಿ, ಅಮಸಿದ್ದ ತೊಳೆ,ರಮಜಾನ್ ಕೊಂಕಣಿ, ಸುನಿಲ್ ತೊಳೆ, ಮಲ್ಲಿಕಾರ್ಜುನ ಕಾಂಬಳೆ, ಮುತ್ತುರಾಜ್ ಹೋನಗೊಂಡ,ಸಂಗಣ್ಣ ಬ್ಯಾಕೋಡ,ರೇವಣಸಿದ್ಧ ಮುತ್ಯಾ, ಮಲ್ಲನಗೌಡ ಬಿರಾದಾರ, ಸುನಿಲ್ ರಾಠೋಡ್, ಭಗತ್ ತಳವಾರ, ಅಲ್ಲಭಕ್ಷಾ ಸಯ್ಯದ್,ಮಲ್ಲಿಕಾರ್ಜುನ ಬಿರಾದಾರ್,ನಿಂಗಪ್ಪ ಶಿವಶರಣ, ಉಮೇಶ ಖಡ್ಡೆ, ಕಂಟೆಪ್ಪಾ ಹ್ಯಾಗಾರ, ಅಕ್ಬರ್ ನದಾಫ,ಪಕ್ಷದ ಕಾರ್ಯಕರ್ತರು, ವಿವಿಧ ಸಂಘಟನೆ ಮುಖಂಡರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಪಂಚಗ್ಯಾರಂಟಿಯಿಂದಜೀವನಮಟ್ಟಸುಧಾರಣೆ:ಎಸ್.ಆರ್.ಪಾಟೀಲ



ಅ.ಶ. ಸುದ್ದಿ ವಿಜಯಪುರ

**ವಿಜಯಪುರ: ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಸದ್ಬಳಕೆಯಿಂದ ಜನರ ಜೀವನಮಟ್ಟ ಸುಧಾರಣೆಯಾಗಿದ್ದು, ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ನೆರವಾಗಿದೆ ಎಂದು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಎಸ್. ಆರ್. ಪಾಟೀಲ ಬ್ಯಾಡಗಿ ಹೇಳಿದರು.**

ನಗರದ ಮಹಾನಗರ ಪಾಲಿಕೆ ಕಚೇ-ರಿಯಲ್ಲಿ ಮಂಗಳವಾರ ನಡೆದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನೆ ಹಾಗೂ ವಾರ್ಡ್ ಮಟ್ಟದ ಸಮಿತಿ ರಚನೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಗ್ಯಾರಂಟಿ ಯೋಜನೆಗಳಿಗೆ ರಾಜ್ಯ ಸರ್ಕಾರ ಸುಮಾರು ?52 ಸಾವಿರ ಕೋಟಿ ಅನುದಾನ ವ್ಯಯಿಸಿದೆ. ಶಕ್ತಿ ಯೋಜನೆಯಡಿ ವಿಜಯಪುರ ವಿಭಾಗದಲ್ಲಿ 2023ರ ಜೂ.11ರಿಂದ ಆಗಸ್ಟ್ 31ರವರೆಗೆ ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ 6.10 ಕೋಟಿ ಪ್ರಯಾಣಿಕರು ಉಚಿತವಾಗಿ ಪ್ರಯಾಣಿಸಿದ್ದು, ಇದರ ಒಟ್ಟು ಮೌಲ್ಯ 83.05 ಕೋಟಿಯಾಗಿದೆ ಎಂದರು.

ಗೃಹಜ್ಯೋತಿ ಯೋಜನೆಯಡಿ ವಿಜಯಪುರ ಮಹಾನಗರ ಪಾಲಿಕೆ ವ್ಯಾಪ್ತಿಯ 1,22,720 ಗ್ರಾಹಕರ ಪೈಕಿ 1,16,653 ಮಂದಿ ನೋಂದಾಯಿಸಿಕೊಂಡಿದ್ದಾರೆ. ಯೋಜನೆಗಾಗಿ ಹೆಸ್ಕಾಂಗೆ 224.30 ಕೋಟಿ ಅನುದಾನ ಬಿಡುಗಡೆಯಾಗಿದೆ ಎಂದು ತಿಳಿಸಿದರು. ಯುವನಿಧಿ ಯೋಜನೆಯಡಿ ವಿಜಯಪುರ ತಾಲೂಕಿನಲ್ಲಿ 6,714 ಯುವಕರು ನೋಂದಾಯಿಸಿಕೊಂಡಿದ್ದು, 6,146 ಅರ್ಹರಿಗೆ ಸೌಲಭ್ಯ ದೊರೆಯುತ್ತಿದೆ.

ಡಿಸೆಂಬರ್ 2023ರಿಂದ ಆಗಸ್ಟ್ 2026ರವರೆಗೆ 19.51 ಕೋಟಿ ಯುವಕರ ಖಾತೆಗೆ ಜಮೆಯಾಗಿದೆ. ಗೃಹಲಕ್ಷ್ಮಿ ಹಾಗೂ ಅನ್ನಭಾಗ್ಯ ಯೋಜನೆಗಳು ಕೂಡ ಕುಟುಂಬಗಳ ಆರ್ಥಿಕ ಮತ್ತು ಆಹಾರ ಭದ್ರತೆಗೆ ನೆರವಾಗುತ್ತಿವೆ ಎಂದರು. ಸಭೆಯಲ್ಲಿ ವಸಂತ ಹೊನಮೋಡೆ, ಶಬ್ಬೀರ ಜಾಗೀರದಾರ, ಮಹಾನಗರ ಪಾಲಿಕೆ ಆಯುಕ್ತ ವಿಜಯಕುಮಾರ ಮೆಕ್ಕಳಕಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

## ವಿಜಯಪುರದಲ್ಲಿ ವಾಲ್ಮೀಕಿ ಭವನ ನಿರ್ಮಾಣಕ್ಕೆ 4 ಕೋಟಿ ಅನುದಾನಕ್ಕೆ ಆಗ್ರಹ

ಅ.ಶ. ಸುದ್ದಿ ವಿಜಯಪುರ



**ವಿಜಯಪುರ: ನಗರದಲ್ಲಿ ಮಹರ್ಷಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕಾಗಿ 4 ಕೋಟಿ ಅನುದಾನ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿ ಅಖಿಲ ಭಾರತೀಯ ವಾಲ್ಮೀಕಿ ಸಂಘದ ವತಿಯಿಂದ ಜಿಲ್ಲಾಧಿಕಾರಿ ಕೆ. ಆನಂದ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.**

ಸಂಘದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಬಟಗಿ ಮಾತನಾಡಿ, ವಿಜಯಪುರದಲ್ಲಿ ವಾಲ್ಮೀಕಿ ಸಮುದಾಯ ಭವನ ನಿರ್ಮಾಣಕ್ಕಾಗಿ ಕಳೆದ 10 ವರ್ಷಗಳಿಂದ ಹೋರಾಟ ನಡೆಸಲಾಗುತ್ತಿದ್ದು, ಇದುವರೆಗೆ ಯಾವುದೇ ಪ್ರಯೋಜನವಾಗಿಲ್ಲ. ಇದರಿಂದ ಸಮುದಾಯದ ಜನರಿಗೆ ನೋವಾಗಿದೆ ಎಂದು ಹೇಳಿದರು.

ಈ ಕುರಿತು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಸರ್ಕಾರಕ್ಕೆ ವಿಶೇಷ ಪ್ರಕರಣವೆಂದು ಪರಿಗಣಿಸಿ ಅನುದಾನ ಬಿಡುಗಡೆ ಮಾಡುವಂತೆ ಪತ್ರ ಬರೆದಿದ್ದಾರೆ.

ಆದ್ದರಿಂದ ಮಹರ್ಷಿ ವಾಲ್ಮೀಕಿ ಜಯಂತಿಗೂ ಮುನ್ನವೇ 4 ಕೋಟಿ ಅನುದಾನ ಬಿಡುಗಡೆ ಮಾಡಿ ಭೂಮಿಪೂಜೆ ನೆರವೇ-ರಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಶೀಘ್ರ ಅನುದಾನ ಬಿಡುಗಡೆ ಮಾಡದಿದ್ದರೆ ರಾಜ್ಯಾದ್ಯಂತ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು.

## ಕುಕನೂರಿನ ಮುರಾರ್ಜಿ ಶಾಲೆಯಲ್ಲಿ ವಿಶ್ವ ಹೃದಯ ಹಾಗೂ ವಿಶ್ವ ರೇಬಿಸ್ ದಿನಾಚರಣೆ




ಅ.ಶ. ಸುದ್ದಿ ಕುಕನೂರು

**ಕುಕನೂರು: ಪಟ್ಟಣದ ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಸೆ.29ರಂದು ವಿಶ್ವ ಹೃದಯ ದಿನ ಹಾಗೂ ವಿಶ್ವ ರೇಬಿಸ್ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಹೃದಯದ ಆರೋಗ್ಯ ಹಾಗೂ ರೇಬಿಸ್ ರೋಗದ ಕುರಿತು ಅರಿವು ಮೂಡಿಸಲಾಯಿತು.**

ಆರೋಗ್ಯಕರ ಜೀವನಶೈಲಿ, ಸಮತೋಲಿತ ಆಹಾರ, ನಿಯಮಿತ ವ್ಯಾಯಾಮ ಹಾಗೂ ಆರೋಗ್ಯದ ಬಗ್ಗೆ ಮುನ್ನೆಚ್ಚರಿಕೆ ವಹಿಸುವ ಅಗತ್ಯವನ್ನು ತಿಳಿಸಲಾಯಿತು. ಇದೇ ಸಂದರ್ಭದಲ್ಲಿ ರೇಬಿಸ್ ರೋಗದ ಕಾರಣಗಳು, ನಾಯಿ ಸೇರಿದಂತೆ ಪ್ರಾಣಿಗಳಿಂದ ಕಚ್ಚಿಸಿಕೊಂಡಾಗ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು ಹಾಗೂ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಪಡೆಯುವ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಯಿತು. ಈ ಸಂದರ್ಭದಲ್ಲಿ ಎನ್‌ಸಿಡಿ ಕೃಷ್ಣರಾವ್ ದೇಶಪಾಂಡೆ ಮಾತನಾಡಿ, ಹೃದಯದ ಆರೋಗ್ಯವನ್ನು ಕಾಪಾಡಿಕೊಳ್ಳಲು ಬಾಲ್ಯದಿಂದಲೇ ಆರೋಗ್ಯಕರ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕು.

ಉತ್ತಮ ಆಹಾರ ಪದ್ಧತಿ, ದೈಹಿಕ ಚಟುವಟಿಕೆ ಹಾಗೂ ಆರೋಗ್ಯದ ಬಗ್ಗೆ ಜಾಗೃತಿ ಹೊಂದಿರುವುದು ಅಗತ್ಯವಾಗಿದೆ ಎಂದು ಹೇಳಿದರು. ಅದೇ ರೀತಿ ರೇಬಿಸ್‌ನಂತಹ ಮಾರಣಾಂತಿಕ ಕಾಯಿಲೆಗಳ ಬಗ್ಗೆ ಪ್ರತಿಯೊಬ್ಬರೂ ಜಾಗೃತಿ ಹೊಂದಬೇಕು. ಪ್ರಾಣಿಗಳಿಂದ ಕಚ್ಚಿಸಿಕೊಂಡ ಸಂದರ್ಭದಲ್ಲಿ ನಿರ್ಲಕ್ಷ್ಯ ಮಾಡದೆ ತಕ್ಷಣವೇ ಆರೋಗ್ಯ ಕೇಂದ್ರಕ್ಕೆ ತೆರಳಿ ಅಗತ್ಯ ಚಿಕಿತ್ಸೆ ಹಾಗೂ ಲಸಿಕೆ ಪಡೆಯಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ರಮ್ಯ, ಕೆ. ಎನ್. ಕುಂಬಾರ್, ಶಾಲೆಯ ಮುಖ್ಯೋಪಾಧ್ಯಾಯರಾದ ಶರಣಪ್ಪ ಅಂಗಡಿ, ಶಿಕ್ಷಕ ವರ್ಗದವರು ಹಾಗೂ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಕುಕನೂರಿನಲ್ಲಿ ತಂಬಾಕು ನಿಯಂತ್ರಣ ಕಾಯ್ದೆ ಉಲ್ಲಂಘನೆ ವಿರುದ್ಧ ದಾಳಿ

## ಕಿರಾಣಿ ಅಂಗಡಿ, ಪಾನ್‌ಶಾಪ್‌ಗಳಿಗೆ 7 ಸಾವಿರ ದಂಡ; ಕಾಯ್ದೆ ಪಾಲನೆಗೆ ಅಧಿಕಾರಿಗಳ ಎಚ್ಚರಿಕೆ

ಅ.ಶ. ಸುದ್ದಿ ಕುಕನೂರು

**ಕುಕನೂರು: ಮಂಗಳವಾರದಂದು ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಚೇರಿ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಕೊಪ್ಪಳ ಇವರ ನೇತೃತ್ವದಲ್ಲಿ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಕುಕನೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕೋಟ್ಪಾ ಕಾಯ್ದೆಯಡಿ ತನಿಖಾ ದಾಳಿ ನಡೆಸಲಾಯಿತು.**

ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ, ಆಹಾರ ಸುರಕ್ಷತಾ ಮತ್ತು ಭದ್ರತಾ ಇಲಾಖೆ, ಯಲಬುರ್ಗಾ ಸಮುದಾಯ ಆರೋಗ್ಯ ಕೇಂದ್ರ, ಕುಕನೂರು ಪಟ್ಟಣ ಪಂಚಾಯಿತಿ ಹಾಗೂ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಕಾರ್ಯಾಚರಣೆ ಕೈಗೊಳ್ಳಲಾಯಿತು. ಈ ವೇಳೆ ಕೋಟ್ಪಾ ಕಾಯ್ದೆ–2003 ಹಾಗೂ 2024ರ ನಿಯಮಗಳನ್ನು ಉಲ್ಲಂಘಿಸಿ ತಂಬಾಕು ಹಾಗೂ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದ ಕಿರಾಣಿ ಅಂಗಡಿಗಳು ಮತ್ತು ಪಾನ್‌ಶಾಪ್‌ಗಳ ವಿರುದ್ಧ ಕ್ರಮ ಕೈಗೊಳ್ಳಲಾಯಿತು.



ಕಾಯ್ದೆಯ ಸೆಕ್ಷನ್ 4 ಮತ್ತು ಸೆಕ್ಷನ್ 6(ಎ) ಅಡಿಯಲ್ಲಿ ನಿಯಮ ಉಲ್ಲಂಘಿಸಿದವ–ರಿಗೆ ಒಟ್ಟು 7,000 ದಂಡ ವಿಧಿಸಲಾಯಿತು.

ಇದೇ ಸಂದರ್ಭದಲ್ಲಿ ಸಾರ್ವಜನಿಕರಿಗೆ ಕೋಟ್ಪಾ ಕಾಯ್ದೆಯ ನಿಯಮಗಳು ಹಾಗೂ ತಂಬಾಕು ಸೇವನೆಯಿಂದ ಉಂಟಾಗುವ ದುಷ್ಪ–ರಿಣಾಮಗಳ ಕುರಿತು ಜಾಗೃತಿ ಮೂಡಿಸಲಾಯಿತು.

ಮುಂದಿನ ದಿನಗಳಲ್ಲಿ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸದಂತೆ ಅಂಗಡಿ ಮಾಲೀಕರಿಗೆ ಹಾಗೂ ಸಾರ್ವಜನಿಕ–ರಿಗೆ ಅಧಿಕಾರಿಗಳು ಎಚ್ಚರಿಕೆ ನೀಡಿದರು.

**ಕಾಯ್ದೆ ಪಾಲನೆ ಅಗತ್ಯ:** ಸಂಗಪ್ಪ ಮಮಟಗೇರಿ ಈ ಸಂದರ್ಭದಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಲಹೆಗಾರ ಸಂಗಪ್ಪ ಮಮಟಗೇರಿ ಮಾತನಾಡಿ, ತಂಬಾಕು ಉತ್ಪನ್ನಗಳ ಬಳಕೆಯಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವ ಹಿನ್ನೆಲೆಯಲ್ಲಿ ತಂಬಾಕು ನಿಯಂತ್ರಣ ಕಾಯ್ದೆಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಅಗತ್ಯವಾಗಿದೆ. ತಂಬಾಕು ಉತ್ಪನ್ನಗಳ ಅಕ್ರಮ ಹಾಗೂ ನಿಯಮಬಾಹಿರ ಮಾರಾಟ ತಡೆಯುವ ನಿಟ್ಟಿನಲ್ಲಿ ನಿರಂತರವಾಗಿ ತಪಾಸಣೆ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕುಕನೂರು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಾಗೇಶ ಕಲ್ಮೇಶ, ಆಹಾರ ಸುರಕ್ಷತಾ ಇಲಾಖೆಯ ಅಧಿಕಾರಿ, ಸಮುದಾಯ ಆರೋಗ್ಯ ಕೇಂದ್ರದ ಕಾಳಪ್ಪ ಕುಂಬಾರ, ಜಿಲ್ಲಾ ತಂಬಾಕು ನಿಯಂತ್ರಣ ಕೇಂದ್ರದ ಸಾಮಾಜಿಕ ಕಾರ್ಯಕರ್ತೆ ಸರಸ್ವತಿ, ಆರೋಗ್ಯ ಇಲಾಖೆ ಸಿಬ್ಬಂದಿ, ಪೊಲೀಸ್ ಇಲಾಖೆ ಸಿಬ್ಬಂದಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾ–ರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು. ಮುಂದಿನ ದಿನಗಳಲ್ಲಿಯೂ ಕುಕನೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕೋಟ್ಪಾ ಕಾಯ್ದೆ ಉಲ್ಲಂಘನೆಗಳ ವಿರುದ್ಧ ತಪಾಸಣೆ ಹಾಗೂ ಜಾಗೃತಿ ಕಾರ್ಯಾಚರಣೆ ಮುಂದುವ–ರಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

# ಯುಪಿಐ ವೈವಾಟಿನ ಮೇಲೆ ಶುಲ್ಕ ಹೇರಿಕೆಗೆ ಕನ್ನಡ ನಾಡು ರೈತ ಸಂಘ ವಿರೋಧ : ಎಂ ಈಶ್ವರಪ್ಪ




ಅ.ಶ. ಸುದ್ದಿ ಬಳ್ಳಾರಿ

**ಬಳ್ಳಾರಿ: ದೇಶದಲ್ಲಿ ಜಿ.ಎಸ್.ಟಿ. ಜಾರಿಗೆ ಬಂದ ನಂತರ ವರ್ತಕರು ಮತ್ತು ಸಾರ್ವಜನಿಕರು ತುಂಬಾ ಸಂಕಷ್ಟವನ್ನು ಅನುಭವಿಸಿದರು ಅದೇ ರೀತಿಯಲ್ಲಿ ಈಗ ಕೇಂದ್ರ ಸರ್ಕಾರದ ಹಣಕಾಸು ಇಲಾಖೆ ಯುಪಿಐ ವೈವಾಟಿನ ಮೇಲೆ ಶುಲ್ಕ ವಿಧಿಸಲು ಹೊರಟಿರುವದು ದೇಶದ ವ್ಯಾಪಾರಿ ವಲಯದ ಮೇಲೆ ಮತ್ತಷ್ಟು ಸಂಕಷ್ಟವನ್ನು ತಂದು ಒಡ್ಡಲಿದೆ ಇದರಿಂದ ವ್ಯಾಪಾರ ವಹಿವಾಟಿನಲ್ಲಿ ಕುಂಠಿತಗೊಳ್ಳುವ ಸಾಧ್ಯತೆ ಇದೆ ಕಾರಣ ಕೇಂದ್ರ ಸರ್ಕಾರದ ಹಣಕಾಸು ಇಲಾಖೆ ಮಂತ್ರಿಗಳಾದ ನಿರ್ಮಲಾ ಸೀತಾರಾಮನ್ ಕೂಡಲೇ ಯುಪಿಐ ಮೇಲೆ ಶುಲ್ಕ ಹೇರುವುದನ್ನು ಹಿಂಪಡೆಯಬೇಕು ಮತ್ತು ಈ ಪದ್ಧತಿಯನ್ನು ಕನ್ನಡ ನಾಡು ರೈತ ಸಂಘ ತೀವ್ರವಾಗಿ ವಿರೋಧಿಸುತ್ತದೆ ಎಂದು ಸಂಘದ ಅಧ್ಯಕ್ಷ ಮೆಣಸಿನ ಈಶ್ವರಪ್ಪ ತಿಳಿಸಿದರು.**

ಭಾರತ ದೇಶದಲ್ಲಿ ವಾಸಿಸುವವರು ಬಡ ಮಧ್ಯಮ ವರ್ಗದ ಜನರು ಆಗಿರುತ್ತಾರೆ. ಭಾರತ ದೇಶದಲ್ಲಿ 70% ರೈತರು ವ್ಯವಸಾಯವನ್ನು ನಂಬಿ ಜೀವನ ಸಾಗಿಸುತ್ತಾರೆ. ತಮ್ಮ ಸರ್ಕಾರ ಯಾವುದೇ ಹೊಸ ಟ್ಯಾಕ್ಸ್ ಜಾರಿಗೆ ತಂದರೆ ಅದು ನೇರವಾಗಿ ರೈತರು ಮತ್ತು ಸಣ್ಣ ವ್ಯಾಪಾ–ರಿಗಳ ಮೇಲೆ ದುಷ್ಪರಿಣಾಮ ಬೀರಲಿದೆ, ಕಾರಣ MDR paid by MCRC Tax ತರುವುದನ್ನು ವಿರೋಧಿಸಿ ಕನ್ನಡ ನಾಡು ರೈತ ಸಂಘ ಅಧ್ಯಕ್ಷ ಮೆಣಸಿನ ಈಶ್ವರಪ್ಪ ಹಾಗೂ ಪದಾಧಿಕಾರಿಗಳು ಈ ಕಾಯ್ದೆ ತರುವುದನ್ನು ವಿರೋಧಿಸಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರಿಗೆ ಮನವಿ ಪತ್ರವನ್ನು ಬಳ್ಳಾರಿ ಜಿಲ್ಲಾಧಿಕಾರಿಗಳ ಮೂಲಕ ರವಾನಿಸಿ ಕೂಡಲೇ ಯುಪಿಐ ಶುಲ್ಕ ಹೇರುವುದನ್ನು ಹಿಂಪಡೆಯಬೇಕೆಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಕನ್ನಡ ನಾಡು ರೈತ ಸಂಘದ ಹಲವು ಪದಾಧಿಕಾರಿಗಳಾದ ಹೆಚ್.ಶ್ರೀನಿವಾಸರೆಡ್ಡಿ, ಮರೇಗೌಡ .ಸಿ, ಬಿ ಶರಣಪ್ಪ, ಹೆಚ್. ಎರಿಸ್ವಾಮಿಗೌಡ, ಬಿ. ರುದ್ರಗೌಡ ಎನ್. ರಮೇಶ್ವಿ. ಮಂಜುನಾಥ, ಬಿ. ಈಶಣ್ಣ, ಕಣ್ಣಿ ಶಿವಮೂರ್ತಿ ಇದ್ದರು.

# ನವಂಬರ್ 5ರಂದು ಬಳ್ಳಾರಿ ತಾಲೂಕು ಮಟ್ಟದ ರೈತ ಕೃಷಿ ಕಾರ್ಮಿಕರ ಸಮ್ಮೇಳನ : ಪೂರ್ವಬಾವಿ ಸಭೆ

ಅ.ಶ. ಸುದ್ದಿ ಬಳ್ಳಾರಿ

**ಬಳ್ಳಾರಿ: ನವೆಂಬರ್ ಐದರಂದು ಎ ಐ ಕೆ ಕೆ ಎಮ್ ಎಸ್ ವತಿಯಿಂದ ಹಮ್ಮಿಕೊಳ್ಳಲಾಗುತ್ತಿರುವ ತಾಲೂಕ ಮಠದ ರೈತ ಕೃಷಿ ಕಾರ್ಮಿಕರ ಸಮ್ಮೇಳನದ ಕುರಿತು ಇಂದು ನಗರದ ಸಂಘದ ಕಚೇರಿಯಲ್ಲಿ ಪೂರ್ವಭಾವಿ ಸಭೆಯನ್ನು ನಡೆಸಲಾಯಿತು.**

**ಈ ಸಭೆಯಲ್ಲಿ ಉಪಸ್ಥಿತರಿದ್ದ ಸಂಘದ ರಾಜ್ಯ ಅಧ್ಯಕ್ಷರಾದ ಎಮ್. ಶಶಿಧರ್ ಅವರು ಸಮ್ಮೇಳನದ ಅವಶ್ಯಕಥೆ ಕುರಿತು ಮಾತನಾಡುತ್ತಾ ಸರ್ಕಾರಗಳ ಬದಲಾವಣೆಯಿಂದ ರೈತರ ಸಮಸ್ಯೆಗಳಿಗೆ ಪರಿಹಾರ ಸಿಗುವುದಿಲ್ಲ.**

ಹಾಗಾಗಿ ರೈತರನ್ನು ಮತ್ತು ಕೃಷಿ ಕಾರ್ಮಿಕರನ್ನು ವೈಚಾರಿಕವಾಗಿ ಮತ್ತು ರಾಜ–ಕೀಯವಾಗಿ ಮೇಲೆತ್ತಲು ಸಮ್ಮೇಳನಗಳು ಮಹತ್ವದ ಪಾತ್ರ ವಹಿಸುತ್ತವೆ. ಈ ವ್ಯವಸ್ಥೆಯಲ್ಲಿ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಸಹ ಈ ವ್ಯವಸ್ಥೆಯ ಪೋಷಕರಾಗಿರುವ ಬಂಡವಾಳಶಾಹಿಗಳ ಕಾರ್ಯಗೈಯುವುದೇ ಅವರ ಜವಾಬ್ದಾರಿಯಾಗಿದೆ.



ಹಾಗಾಗಿ ರೈತ ಮತ್ತು ಕೃಷಿ ಕಾರ್ಮಿಕರ ಸಮಸ್ಯೆಗಳಿಗೆ ಇವರಿಂದ ಬದಲಾವಣೆ ಸಾಧ್ಯವಿಲ್ಲ. ಈ ಚಿಂತನೆಯನ್ನು ರೈತ ಮತ್ತು ಕೃಷಿ ಕಾರ್ಮಿಕರಲ್ಲಿ ಬಿತ್ತಲು ಮೂರನೇ ಬಳ್ಳಾರಿ ತಾಲೂಕು ಸಮ್ಮೇಳನ ಕಾರ್ಯ ನಿರ್ವಹಿಸಬೇಕು ಮತ್ತು ಆ ನಿಟ್ಟಿನಲ್ಲಿ ತಾಲೂಕಿನ ಎಲ್ಲಾ ಹಳ್ಳಿಗಳಲ್ಲಿ ಸಮ್ಮೇಳನದ ಚರ್ಚಾ ವಿಷಯಗಳನ್ನು ಹರಡಬೇಕು ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ಗೋವಿಂದ್, ಜಿಲ್ಲಾ ಕಾರ್ಯದರ್ಶಿ ಗುರಳ್ಳಿ ರಾಜ, ಬಳ್ಳಾರಿ ತಾಲೂಕ್ ಅಧ್ಯಕ್ಷ ಈರಣ್ಣ ಗಡಿಗೆ, ರಾಜ್ಯ ಸಮಿತಿ ಸದಸ್ಯರಾದ ಈ ಹನುಮಂತಪ್ಪ ಹಲವಾರು ತಾಲೂಕು ಸದಸ್ಯರು ಉಪಸ್ಥಿತರಿದ್ದಾರೆ.

1ನೇ ಪುಟದಿಂದ....

ಮೋದಿ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಹೇಳಿದರು. ಮತದಾರರ ಪಟ್ಟಿಯಲ್ಲಿ ಪಾರದರ್ಶಕತೆ ಇರಬೇಕು ಮತ್ತು ಚುನಾವಣಾ ಪ್ರಕ್ರಿಯೆಯು ನಿಷ್ಪಕ್ಷಪಾತವಾಗಿರಬೇಕು ಎಂದು ನಾವು ಸಿಡಬ್ಲ್ಯೂಸಿ ಸಭೆಯಲ್ಲಿ ಪ್ರತಿಜ್ಞೆ ಮಾಡಬೇಕು. ಸಂಸ್ಥೆಗಳು ಸ್ವತಂತ್ರವಾಗಿರಬೇಕು ಮತ್ತು ಪ್ರತಿಯೊಬ್ಬ ಭಾರತೀಯನ ಮತವನ್ನು ರಕ್ಷಿಸಬೇಕು ಎಂದರು ಇದು ನಮ್ಮ ಸಂವಿಧಾನದ ಮೂಲ ಮಂತ್ರವಾಗಿದೆ ಮತ್ತು ನಮ್ಮ ಪ್ರಜಾಪ್ರಭುತ್ವದ ಆತ್ಮವಾಗಿದೆ.ಈ ಜವಾಬ್ದಾರಿಯನ್ನು ಪೂರೈಸುವಲ್ಲಿ ಕಾಂಗ್ರೆಸ್ ಪಕ್ಷವು ಹಿಂದೆ ಸರಿಯುವುದಿಲ್ಲ ಎಂದು ತಿಳಿಸಿದರು. ಈ ಎಲ್ಲಾ ವಿಷಯಗಳನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಲಾಗುವುದು ಹಾಗೂ ದೇಶಾದ್ಯಂತ ಬೀದಿಗಿಳಿದು ಹೋರಾಟ ಮಾಡುತ್ತೇವೆ ಎಂದು ಘೋಷಿಸಿದರು. ಸಿಇಸಿ ವಿರುದ್ಧ ವಿಚಾರಣೆಗೆ ಸುಪ್ರೀಂ ಅಸ್ತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ನೇತೃತ್ವದ ಚುನಾವಣಾ ಆಯೋಗದ ಕೆಲವು ನಿರ್ಧಾರಗಳ ಬಗ್ಗೆ ಪ್ರಶ್ನೆ ಎತ್ತಿರುವ ಅರ್ಜಿಯನ್ನು ಮುಂದಿನ ವಾರ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಮಂಗಳವಾರ ಒಪ್ಪಿಗೆ ನೀಡಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಹಾಗೂ ವಿ. ಮೋಹನಾ ಅವರನ್ನೊಳಗೊಂಡ ಪೀಠದ ಮುಂದೆ ಹಿರಿಯ ವಕೀಲ ವಿಕಾಸ್ ಸಿಂಗ್ ಅವರು ಅರ್ಜಿಯ ತ್ವರಿತ ವಿಚಾರಣೆಗೆ ಮನವಿ ಮಾಡಿದರು. ಬಹುಸದಸ್ಯರನ್ನೊಳಗೊಂಡ ಚುನಾವಣಾ ಆಯೋಗದ ನಿರ್ಧಾರಗಳು ಕಾನೂನುಬದ್ಧ ವ್ಯವಸ್ಥೆಯ ಪ್ರಕಾರ ಸರ್ವಾನುಮತದಿಂದ ಅಥ–'ವಾ ಬಹುಮತದ ಆಧಾರದ ಮೇಲೆ ಕೈಗೊಳ್ಳಬೇಕಾಗುತ್ತದೆ ಎಂದು ವಿಕಾಸ್ ಸಿಂಗ್ ನ್ಯಾಯಪೀಠದ ಗಮನಕ್ಕೆ ತಂದರು. ಪ್ರಸ್ತುತ ಆಯೋಗದ ಕಾರ್ಯವೈಖರಿಯಲ್ಲಿ ಕೆಲವು ನಿರ್ಧಾರಗಳು ಸರ್ವಾನುಮತದಿಂದ ಕೈಗೊಳ್ಳಲಾಗಿದೆಯೇ ಎಂಬ ಬಗ್ಗೆ ಗಂಭೀರ ಅನುಮಾನವಿದೆ ಎಂದು ಅವರು ವಾದಿಸಿದರು. ಈ ಅರ್ಜಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಸೇರಿದಂತೆ ಚುನಾವಣಾ ಆಯೋಗದ ಇತ್ತೀಚಿನ ಕಾರ್ಯವೈಖರಿ ಕುರಿತು ಎದ್ದಿರುವ ಚರ್ಚೆಯ ನಡುವೆಯೇ ಬಂದಿದೆ. 'ಇಂಡಿಯನ್ ಎಕ್ಸ್‌ಪ್ರೆಸ್' ವರದಿ ಪ್ರಕಾರ, ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಅವರು ಕಳೆದ 10 ತಿಂಗಳಲ್ಲಿ ಎಸ್‌ಐಆರ್‌ಗೆ ಸಂಬಂಧಿಸಿದ ನಿರ್ಧಾರಗಳು ಹಾಗೂ ಆದೇಶಗಳ ಕುರಿತು ಕನಿಷ್ಠ 14 ಬಾರಿ ಆಕ್ಷೇಪ ದಾಖಲಿಸಿದ್ದರು. ಕೆಲವು ನಿರ್ಧಾರಗಳು ತಮ್ಮ ತಿಳಿವಳಿಕೆ ಅಥವಾ ಶಿಫಾರಸು ಇಲ್ಲದೆ ಹೊರಬಂದಿವೆ ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದ್ದರು ಎಂದು ವರದಿ ತಿಳಿಸಿದೆ.

# ಕನ್ನಡ ಜಾಗೃತಿ ವೇದಿಕೆಯಾ ಅಧ್ಯಕ್ಷರಾಗಿ ಕಾರ್ತಿಕ್ ಉಪ್ಪಾರ್ ಅವಿರೋಧವಾಗಿ ಆಯ್ಕೆ





ಅ.ಶ. ಸುದ್ದಿ ಹಗರಿಬೊಮ್ಮನಹಳ್ಳಿ

**ಹಗರಿಬೊಮ್ಮನಹಳ್ಳಿ: ದಿನಾಂಕ 29 – 9 – 2026ರ ಮಂಗಳವಾರ ದಿನದಂದು ಹಗ–ರಿಬೊಮ್ಮಹಳ್ಳಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕನ್ನಡ ಜಾಗೃತಿ ವೇದಿಕೆಯ ಅಧ್ಯಕ್ಷರಾಗಿ ಕಾರ್ತಿಕ್ ಉಪ್ಪಾರ್ ರವರು ಆಯ್ಕೆಯಾಗಿರುತ್ತಾರೆ. ಈ ಸಂದರ್ಭದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಕವಿತಾ ಹಾಗೂ ವಿಜಯನಗರ ಜಿಲ್ಲಾ ಅಧ್ಯಕ್ಷರಾದ ಬಿ ಕೆ ಬಸವರಾಜ್ ಮತ್ತು ಮಹಿಳಾ ಘಟಕದ ಜಿಲ್ಲಾ ಅಧ್ಯಕ್ಷರಾದ ಶ್ರೀಮತಿ ಜಿ ಈರಮ್ಮ ಇವರ ಸಮ್ಮುಖದಲ್ಲಿ ನೂತನ ತಾಲೂಕು ಘಟಕದ ಅಧ್ಯಕ್ಷ ಆಯ್ಕೆಯು ನೆಡೆದುಬಂದಿದೆ.**

ಅದರ ಜೊತೆಯಲ್ಲಿಯೇ ತಾಲೂಕಿನಲ್ಲಿ ಗೌರವ ಅಧ್ಯಕ್ಷರಾಗಿ ತಾಜಾಹುದ್ದೀನ್ ಹಾಗೂ ನಗರ ಘಟಕ ಗೌರವ ಅಧ್ಯಕ್ಷರು ಯು ನಾಗರಾಜ್ ನಗರ ಘಟಕದ ಅಧ್ಯಕ್ಷರು ಬಿಪಿ ಪ್ರಶಾಂತ್ ಮತ್ತು ಉಪಾಧ್ಯಕ್ಷರುಗಳಾದ ಹನುಮಂತಪ್ಪ , ಕರಿ ಬಸವರಾಜ , ನಾಗರಾಜ ಪ್ರಧಾನ ಕಾರ್ಯದರ್ಶಿಗಳಾದ ಬಿ ಮಂಜುನಾಥ್ ಮತ್ತು ಸಂಘಟನಾ ಕಾರ್ಯದರ್ಶಿಗಳು ಕೆ ನಾಗರಾಜ್ ಯು ಸಂತೋಷ್ ಯು ಹಾಗೂ ಆಲೂಬೂರು ಕಲ್ಲೇಶ್ , ಸರ್ದಾರ್ ಉಲ್ಲಾಸ್, ಎಸ್ ಕಾಳೇಶ್ ಮತ್ತು ಖಜಾಂಚಿಯಾದ ಮಾರುತಿ ಅವರನ್ನು ಸಹ ಮತಗಳೊಂದಿಗೆ ಆಯ್ಕೆ ಮಾಡಲಾಗಿರುತ್ತದೆ.

ಈ ಸಂದರ್ಭದಲ್ಲಿ ಮಾತನಾಡಿದ ನೂತನವಾಗಿ ಆಯ್ಕೆಯಾಗಿರುವ ಕಾರ್ತಿಕ್ ಉಪ್ಪಾರ್ ಅವರು ತಾಲೂಕಿನ ಏಳಿಗೆಗಾಗಿ ಶ್ರಮಿಸುತ್ತೇವೆ. ಹಾಗೂ ತಾಲೂಕಿನಲ್ಲಿ ಆಗುತ್ತಿರುವಂತಹ ಸಮಸ್ಯೆಗಳಿಗೆ ಮುಂದಾಳತ್ವ ವಹಿಸಿ ಸಾರ್ವಜನಿಕರಿಗೆ ದೊರೆಯಬೇಕಾಗಿರುವಂತಹ ಮೂಲಭೂತ ಸೌಕರ್ಯಗಳಿಗೆ ಸ್ಪಂದಿಸುತ್ತೇವೆ ಹಾಗೂ ಇದರ ಜೊತೆಯಲ್ಲಿಯೇ ತಾಲೂಕಿನಾದ್ಯಂತ ಕಾರ್ಖಾನೆಗಳು ಹೆಚ್ಚಾಗುತ್ತಿರುವುದರಿಂದ ಸ್ಥಳೀಯವಾರು ಯುವಕರಿಗೆ ಉದ್ಯೋಗ ಅವಕಾಶ ಕಲ್ಪಿಸಲು ಸಂಸ್ಥೆಗಳೊಂದಿಗೆ ಮಾತುಕತೆ ನಡೆಸುತ್ತೇವೆ ಎಂದು ಮಾತನಾಡಿದರು.

## 'ವಚನಾಮೃತ'

ಬಂಜೆ ಬಂಜೆ ಎಂದು ನಂಜಿರಿಸಿ
ಚುಚ್ಚೊ ಮೂಳರಿಗೆ ನಿತ್ಯ ಮೃಷ್ಟಾನ್ನವೇ
ಬಡಿಸಿ ಕಳಿಸಬೇಕಯ್ಯ ಬಾಡಿಗೆ
ಮನೆಯೊಳ್ ಬಂಧಿ ನಾವೆಲ್ಲ ಎಂಬ–
ರಿಯದ ಮಂದಿಯೊಳ್ ನನ್ನಗೇನಿದೆ
ಕಜ್ಜ ಸತ್ಯವಾಣಿ!!.



ವಾಣಿ ಭಂಡಾರಿ.

# ಏಷ್ಯನ್ ಗೇಮ್ಸ್ : ಟ್ರ್ಯಾಪ್ ಶೂಟಿಂಗ್‌ನಲ್ಲಿ ಚಿನ್ನದ ಪದಕ ಗೆದ್ದ ನೀರೂ ಧಾಂಡಾ

ಅ.ಶ. ಸುದ್ದಿ ಜಪಾನ್

**ಜಪಾನ್: ಐಚಿ–ನಾಗೋಯಾದಲ್ಲಿ ನಡೆಯುತ್ತಿರುವ ಏಷ್ಯನ್ ಗೇಮ್ಸ್‌ನಲ್ಲಿ ಮಹಿಳೆಯರ ಟ್ರ್ಯಾಪ್ ಸ್ಪರ್ಧೆಯಲ್ಲಿ ಜಿಂದ್ ಮೂಲದ 26 ವರ್ಷದ ನೀರು ಧಾಂಡಾ ಚಿನ್ನದ ಪದಕ ಗೆದ್ದು ಐತಿಹಾಸಿಕ ಸಾಧನೆ ಮಾಡಿದ್ದಾರೆ. ಐಚಿ ಪ್ರಿಫೆಕ್ಚರಲ್ ಜನರಲ್ ಶೂಟಿಂಗ್ ಗ್ಯಾಲರಿಯಲ್ಲಿ ಸು–ರಿಯುತ್ತಿದ್ದ ಮಳೆಯನ್ನೂ ಲೆಕ್ಕಿಸದೆ ನೀರು ಧಾಂಡಾ ಮಹಿಳೆಯರ ಟ್ರ್ಯಾಪ್ ಫೈನಲ್‌ನಲ್ಲಿ ಪ್ರಾಬಲ್ಯ ಮೆರೆದರು.**

ಮಹಿಳೆಯರ ವೈಯಕ್ತಿಕ ಟ್ರ್ಯಾಪ್ ವಿಭಾಗದಲ್ಲಿ ವಿಶ್ವಕಪ್ ಚಿನ್ನ ಗೆದ್ದ ಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದ ಕೆಲವೇ ತಿಂಗಳುಗಳ ಬಳಿಕ ಇದೀಗ ಏಷ್ಯನ್ ಗೇಮ್ಸ್‌ನಲ್ಲೂ ಅಗ್ರಸ್ಥಾನಕ್ಕೇರಿದ್ದಾರೆ. ಏಷ್ಯನ್ ಗೇಮ್ಸ್‌ನ ಮಹಿಳೆಯರ ಟ್ರ್ಯಾಪ್



ಸ್ಪರ್ಧೆಯಲ್ಲಿ ಭಾರತಕ್ಕೆ ಲಭಿಸಿದ ಮೊದಲ ವೈಯಕ್ತಿಕ ಚಿನ್ನದ ಪದಕ ಇದಾಗಿದೆ.

ಭಾರತೀಯ ಮಹಿಳಾ ತಂಡದೊಂದಿಗೆ ಬೆಳ್ಳಿ ಪದಕ ಗೆದ್ದ ಬಳಿಕ ನೀರು ಈ ವೈಯಕ್ತಿಕ ಚಿನ್ನವನ್ನು ತಮ್ಮದಾಗಿಸಿಕೊಂಡಿದ್ದಾರೆ. ಸವಾಲಿನ ಪರಿಸ್ಥಿತಿಗಳಲ್ಲಿ ಐದು ಸುತ್ತುಗಳ ಮೂಲಕ ಶೂಟರ್‌ಗಳ ಕೌಶಲ್ಯವನ್ನು ಪರೀಕ್ಷಿಸುವ ಮೂರು ದಿನಗಳ ಅರ್ಹತಾ ಪ್ರಕ್ರಿಯೆಯಲ್ಲಿ ಅತ್ಯುತ್ತಮ ಸ್ಥಿರತೆಯನ್ನು ಕಾಯ್ದುಕೊಂಡ ಅವರು, 125ಕ್ಕೆ 118 ಅಂಕಗಳೊಂದಿಗೆ ಅರ್ಹತಾ ಸುತ್ತಿನಲ್ಲಿ ಅಗ್ರಸ್ಥಾನ ಪಡೆದರು. ಫೈನಲ್‌ನಲ್ಲಿ ನೀರು 30ಕ್ಕೆ 28 ಅಂಕಗಳನ್ನು ಗಳಿಸಿ, ಹಿಂದಿನ ಏಷ್ಯನ್ ದಾಖಲೆಯನ್ನು ನಾಲ್ಕು ಅಂಕಗಳ ಅಂತರದಿಂದ ಉತ್ತಮಪಡಿಸಿದರು.

ಚೀನಾದ ಸುನ್ ಯುನಾಂಗ್ 30ಕ್ಕೆ 26 ಅಂಕಗಳೊಂದಿಗೆ ಬೆಳ್ಳಿ ಪದಕ ಗೆದ್ದರೆ, ಕುವೈತ್‌ನ ಹಜಾರ್ ಅಬ್ದುಲಲಿಕ್ 25ಕ್ಕೆ 21 ಅಂಕಗಳೊಂದಿಗೆ ಕಂಚಿನ ಪದಕ ಪಡೆದರು. ಅಂತಿಮ ಸರಣಿಯನ್ನು ಪ್ರವೇಶಿಸುವಾಗ ನೀರು ಎರಡು ಅಂಕಗಳ ಮುನ್ನಡೆಯನ್ನು ಹೊಂದಿದ್ದರು. ಅತ್ಯಂತ ನಿರ್ಣಾಯಕ ಕ್ಷಣದಲ್ಲಿ ಅವರು ಐದು ಶಾಟ್‌ಗಳ ಪರಿಪೂರ್ಣ ಸರಣಿಯನ್ನು ಸಿಡಿಸಿ, ಸುನ್ ಯುನಾಂಗ್ ಅವರನ್ನು ಹಿಂದಿಕ್ಕಿದರು. ಒಂದೇ ದಿನದಲ್ಲಿ ಹಲವು ದಾಖಲೆ: 2026ರ ಏಷ್ಯನ್ ಗೇಮ್ಸ್‌ನಲ್ಲಿ ವೈಯಕ್ತಿಕ ವಿಭಾಗದಲ್ಲಿ ಮೊದಲ ಬಂಗಾರದ ಪದಕ ವಿಜೇತೆ. ಪದಕ ಸುತ್ತಿನಲ್ಲಿ 30 ಅಂಕಗಳಿಗೆ 28 ಅಂಕ ಪಡೆದು ಹಿಂದಿನ ಏಷ್ಯನ್ ದಾಖಲೆ ಅಳಿಸುವಿಕೆ.

# ಲೇಖಕರ ದಿನಚರಿ...

# ಗಣೇಶ ಹಾಗೂ ಗರಿಕೆ

ಭಾರತ ದೇಶದಾದ್ಯಂತ ಅತ್ಯಂತ ಸಡಗರ ಸಂಭ್ರಮದಿಂದ ಆಚರಿಸುವ ಗಣೇಶ ಹಬ್ಬಕ್ಕೆ ಭರ್ಜರಿ ತಯಾರಿ ನಡೆದು ಈಗಾಗಲೇ ಗಣೇಶನನ್ನು ಕೂರಿಸಿ ಆ ಬಾಲವೃದ್ಧರಾದಿಯಾಗಿ ಎಲ್ಲರೂ ಸಂಭ್ರಮಿಸಿ ಮೆರೆದಿದ್ದಾರೆ. ಗಣೇಶನ ಕುರಿತು ಹಲವಾರು ಕಥೆಗಳನ್ನು ಚಿಕ್ಕಂದಿನಿಂದಲೂ ಕೇಳಿ ಬಂದಿರುವ ನಮಗೆ ಅದರಲ್ಲಿ ಹೆಚ್ಚಾಗಿ ಆತನ ಮಹಾನತೆ ಹಾಗೂ ಗಹನತೆಗಳ ಕುರಿತ ವಿವರಣೆಗಳು ದೊರೆಯುತ್ತವೆ ಮತ್ತೆ ಬಾಲ ಗಣೇಶನ ಕುರಿತ ಕೆಲ ಕಥೆಗಳು ಕೂಡ ಚಾಲ್ತಿಯಲ್ಲಿವೆ.

ಗಣೇಶನ ಕುರಿತು ನಮಗೆ ಗೊತ್ತಿರುವ ವಿವರಣೆಗಳು ಬಹಳ ಕಡಿಮೆ. ಅಂತೆಯೇ ಆತನ ಪೂಜೆಯ ವಿಧಾನ ಕೂಡ ಬಹುತೇಕ ಬಾರಿ ನಾವು ಎಲ್ಲವನ್ನು ಕುರುಡರಂತೆ ಹಿಂಬಾಲಿಸುತ್ತೇವೆ ಆದರೆ ಸಂಪ್ರದಾಯ ವಿಧಿ ವಿಧಾನಗಳ ಹಿಂದಿರುವ ಸತ್ಯವನ್ನು ಅರಿತು ಪೂಜಿಸಿದಾಗ ಆ ಆಚರಣೆಗೆ ಒಂದು ಉನ್ನತ ಉದ್ದೇಶವಿರುವುದರ ಕುರಿತು ನಮಗೆ ಅರಿವಾಗುತ್ತದೆ. ಅಂತಹದ್ದೇ ಒಂದು ಕಥೆಯನ್ನು ನಾನು ನಿಮಗಿಲ್ಲಿ ಹೇಳುತ್ತಿದ್ದೇನೆ ಸಾಮಾನ್ಯವಾಗಿ ಗಣೇಶನಿಗೆ ಇಪ್ಪತ್ತೊಂದು ಗರಿಕೆಗಳನ್ನು ಏರಿಸುತ್ತಾರೆ ಆದರೆ ಇಪ್ಪತ್ತೊಂದು ಗರಿಕೆಗಳನ್ನು ಏರಿಸುವುದರ ಹಿಂದಿನ ಕಥೆ ಏನು? ಎಂದು ನೋಡಿದಾಗ ಗರಿಕೆಯ ಹಿಂದಿರುವ ಪೌರಾಣಿಕ ಮತ್ತು ಆಧ್ಯಾತ್ಮಿಕ ಕಥೆಯ ಅರಿವಾಗುತ್ತದೆ.

ಈ ಹಿಂದೆ ಅನಲಾಸುರ ಎಂಬ ರಾಕ್ಷಸ ಋಷಿಮುನಿಗಳಿಗೆ ಹಾಗೂ ದೇವತೆಗಳಿಗೆ ವಿಪರೀತ ಉಪಟಳವನ್ನು ನೀಡುತ್ತಿದ್ದ ಆತನ ಕಾಟದಿಂದ ಬೇಸತ್ತ ಸಾಧು ಸಂತರು ಹಾಗೂ ದೇವತೆಗಳು ಆತನ ಉಪಟಳದಿಂದ ತಮ್ಮನ್ನು ರಕ್ಷಿಸು ಎಂದು ವಿಘ್ನ ನಿವಾರಕ ವಿಘ್ನೇಶ್ವರನನ್ನು ಬೇಡಿಕೊಂಡರು. ಭಕ್ತವತ್ಸಲನಾದ ಗಣೇಶನು ಅನಲಾಸುರನೊಂದಿಗೆ ಹೋರಾಡಿ ಆತನನ್ನು ಸೋಲಿಸಿ ಅಂತಿಮವಾಗಿ ಆತನನ್ನು ತನ್ನ ಸೊಂಡಿಲಿನ ಮೂಲಕ ನುಂಗಿಬಿಟ್ಟನು... ಹೀಗೆ ಅನಲಾಸುರನ ಅಂತ್ಯವೇನೋ ಆಯಿತು ಆದರೆ ಅನಲ ಎಂದರೆ ಬೆಂಕಿ ಆ ಬೆಂಕಿಯ ಪ್ರತಿನಿಧಿತ್ವವನ್ನು ಹೊಂದಿದ ಅಸುರ ಅನಲಾಸುರ ಗಣೇಶನ ಹೊಟ್ಟೆಯಲ್ಲಿ ಜೀರ್ಣವಾಗಿ ಕರಗಿ ಹೋದರೂ ಕೂಡ ಅದರ ತಾಪ ಶಮನವಾಗಲೇ ಇಲ್ಲ.

ಅದೆಷ್ಟೇ ತಂಪು ನೀಡುವ ಪದಾರ್ಥಗಳನ್ನು ಸೇವಿಸಿದರೂ ಕೂಡ ಗಣೇಶನ ಹೊಟ್ಟೆಯ ತಾಪ ಹೆಚ್ಚುತ್ತಾ ಹೋಯಿತು. ಶಿವನೋ ಗಣೇಶನಿಗೆ ಗಂಗೆಯನ್ನು ಹರಿಸಿದ ಗಣೇಶನ ಹೊಟ್ಟೆಯ ತಾಪ ಕಡಿಮೆಯಾಗಲು ಗಂಗೆಯನ್ನು ಹರಿಸಿದ ಆತನ ಹೊಟ್ಟೆಯ ಸುತ್ತಲೂ ಶೀತ ರಕ್ತ ಪ್ರಾಣಿಯಾದ ತನ್ನ ಕೊರಳ ಸರ್ಪವನ್ನು ಸುತ್ತಿದ ಚಂದ್ರನನ್ನು ಆತನ ಮೇಲಿರಿಸಿದ ವಿಷ್ಣು ಶೀತಲ ಗುಣಕ್ಕೆ ಹೆಸರಾದ ಕಮಲವನ್ನು ಆತನ ಕೈಗಿರಿಸಿದ ಗಂಧವನ್ನು ತೇಯ್ದು ಗಣೇಶನ ಹೊಟ್ಟೆಯ ಮೇಲೆ ಸವರಿದ. ಅಷ್ಟ ದಿಕ್ಪಾಲಕರಲ್ಲಿ ವಾಯು ಗಾಳಿಯನ್ನು ಬೀಸಿದ ಇಂದ್ರ ಮಳೆಯನ್ನು ಸುರಿಸಿದ ಆದರೂ ಅನಲಾಸುರನನ್ನು ನುಂಗಿದ ಗಣೇಶನ ಹೊಟ್ಟೆಯ ತಾಪ ಕಡಿಮೆಯಾಗಲೇ ಇಲ್ಲ. ಅಂತಿಮವಾಗಿ ಮುನಿಶ್ರೇಷ್ಠರಾದ ಕಶ್ಯಪ



ಮಹರ್ಷಿಗಳು ಹಾಗೂ ಎಂಬತ್ತೆಂಟು ಸಾವಿರ ಋಷಿಮುನಿಗಳು ಗಣೇಶನಿಗೆ ಇಪ್ಪತ್ತೊಂದು ಗರಿಕೆಗಳನ್ನು ಗಂಟು ಮಾಡಿ ನೀಡಿದರು.

ಹಾಗೆ ಗರಿಕೆಗಳನ್ನು ತನ್ನ ತಲೆಯ ಮೇಲೆ ಇರಿಸಿಕೊಂಡ ಗಣೇಶನಿಗೆ ತಂಪಿನ ಅನುಭವವಾಯಿತು. ಆತನ ಹೊಟ್ಟೆಯ ತಾಪ ಕಡಿಮೆಯಾಯಿತು. ದೇಹಕ್ಕೆ ತಂಪಿನ ಅನುಭವ ದೊರೆಯಿತು , ಗಣೇಶ ನೆಮ್ಮದಿಯ ನಿಟ್ಟಿಸಿರು ಬಿಟ್ಟ. ಅಂತೆಯೇ ಗಣೇಶ ತನ್ನ ಭಕ್ತರು ತನಗೆ 21 ಗರಿಕೆಗಳನ್ನು ಅರ್ಪಿಸಿದರೆ ಸಾಕು ತಾನು ತೃಪ್ತ ಎಂದು ಹೇಳಿದ. ಅಂದಿನಿಂದ ನಾವು ಗಣೇಶನಿಗೆ ನಾವು 21 ಗರಿಕೆಗಳನ್ನು ಅರ್ಪಿಸುತ್ತೇವೆ. 21 ಗರಿಕೆಗಳೇ ಏಕೆ ? ಎಂದು ಪ್ರಶ್ನಿಸಿದಾಗ ಅದಕ್ಕೆ ಉತ್ತರ ಹೀಗಿದೆ. 21 ಗರಿಕೆಗಳಲ್ಲಿ ಮೊದಲ ಐದು ಗರಿಕೆಗಳು ಪಂಚ ಮಹಾಭೂತಗಳಾದ ಭೂಮಿ, ಅಗ್ನಿ, ವಾಯು, ಜಲ ಹಾಗೂ ಆಕಾಶ ತತ್ವಗಳನ್ನು ಪ್ರತಿನಿಧಿಸುತ್ತವೆ ಮತ್ತೆ ಐದು ಗರಿಕೆಗಳು ಪಂಚ ಜ್ಞಾನೇಂದ್ರಿಯಗಳಾದ ತ್ವಕ್ ಚಕ್ಷು ಜಿಹ್ವಾ ಘ್ರಾಣ, ಶ್ರೋತ್ರ ಗಳನ್ನು ಪ್ರತಿನಿಧಿಸುತ್ತದೆ ಮತ್ತೆ ಐದು ಗರಿಕೆಗಳು ಪಂಚ ಕರ್ಮೇಂದ್ರಿಯಗಳಾದ ಚರ್ಮ, ಕಣ್ಣು, ನಾಲಿಗೆ, ಮೂಗು ಹಾಗೂ ಕಿವಿಗಳನ್ನು ಪ್ರತಿನಿಧಿಸುತ್ತವೆ. ಕೊನೆಯ ಪಂಚಪ್ರಾಣಗಳು ಪ್ರಾಣ ಅಪಾನ ಸಮಾನ ಉಡಾನ ವ್ಯಾನ ಮತ್ತು ಕೊನೆಯ ಒಂದು ಗರಿಕೆಯು ಮನಸ್ಸನ್ನು ಪ್ರತಿಪಾದಿಸುತ್ತದೆ.



ಯಾರು ಈ 21 ಗರಿಕೆಗಳನ್ನು ಅರ್ಪಿಸುವರೋ ಅವರು ಗಣೇಶನ ಕೃಪೆಗೆ ಪಾತ್ರರಾಗುತ್ತಾರೆ. ನೋಡಿದಿರಾ ಸ್ನೇಹಿತರೆ ಪ್ರತಿಯೊಂದು ಪೂಜೆಯ ವಿಧಾನಗಳ ಹಿಂದೆ ಒಂದು ಕಥೆ ಇರುತ್ತದೆ. ಅದನ್ನು ಅರಿತು ಮಾಡಿದಾಗ ಆ ಆಚರಣೆಗೆ ಒಂದು ಅರ್ಥ ದೊರಕುತ್ತದೆ... ಏನಂತೀರಾ??



ವೀಣಾ ಹೇಮಂತ್ ಗೌಡ ಪಾಟೀಲ, ಮುಂಡರಗಿ ಗದಗ.

## ನುಡಿ

ನುಡಿಯಿರಲಿ ಗಿಳಿಮಾತಿನಂತೆ
ನೂರು ಜನರೊಪ್ಪುವಂತೆ
ಅರಿ ವಾಗ್ಮಯತೆಯಲ್ಲಿನ ಮಹತೆ
ಹಿತಮಿತವಿರಲಿ ನುಡಿಸ್ಫುಟತೆ

ನುಡಿ ಕದನದ ರೂಪ ತಳೆಯದಿರಲಿ
ಕಡಲಾಳದ ತಂಪು ನುಡಿಯಲಿರಲಿ
ಅಮಿತ ಶಕ್ತಿಯು ಹೊರಹೊಮ್ಮುತಿರಲಿ
ನುಡಿ ನೀರಸತೆಯ ತೊರೆಯುವಂತಿರಲಿ
ನುಡಿ ಹಿಡಿ ಜ್ಞಾನದ ಬೆಳಕು ಚೆಲ್ಲುತಿರಲಿ
ನೊಂದ ಮನಕೆ ನುಡಿ ಮುಲಾಮು ಆಗಿರಲಿ
ಚಿಂತನೆಯ ಝರಿ ಹರಿಯುತಿರಲಿ
ಬಡಿದಾಡುತ್ತಿಹ ಮನವ ನೆಚ್ಚರಿಸುತಿರಲಿ

ನುಡಿ ಅಂತರಂಗದ ಪ್ರತಿಬಿಂಬವಾಗಿರಲಿ
ನಿನ್ನ ನುಡಿ ಉಪಮಾನವಾಗಿರಲಿ
ಸೂಕ್ಷ್ಮತೆಯ ರಸವಾಕ್ಯವಾಗಿರಲಿ
ಸಂವೇದನೆಯ ಸಂದೇಶವಾಗಿರಲಿ

ನುಡಿ ಅನುಭವದ ಪಾಕದಲಿ ಅದ್ದಿದಂತಿರಲಿ
ಅರ್ಥವತ್ತಾಗಿ ಭಾವ ಶುದ್ಧವಾಗಿರಲಿ
ಸರಳತೆಗೆ ದರ್ಪಣ ಹಿಡಿದಂತಿರಲಿ
ಸಂಕ್ಷಿಪ್ತದ ಸಾರನುಡಿಗಟ್ಟಿನಲ್ಲಿರಲಿ



ಆರತಿ ಏನ್ ರಾವ್

# ಮಕ್ಕಳ ಮಾನಸಿಕ ಸ್ವಾಸ್ಥ್ಯ ನಮ್ಮೆಲ್ಲರ ಹೊಣೆ

ಇಂದಿನ ತಾಂತ್ರಿಕ ಯುಗದಲ್ಲಿ ನಾವು ಸುಸಜ್ಜಿತ ಶಾಲೆಗಳು, ಸ್ಮಾರ್ಟ್ ಕ್ಲಾಸ್ ರೂಮ್‌ಗಳು ಮತ್ತು ಅತ್ಯಾಧುನಿಕ ಪಠ್ಯಕ್ರಮವನ್ನು ಮಕ್ಕಳಿಗೆ ನೀಡುತ್ತಿದ್ದೇವೆ. ಆದರೆ, ಈ ಬಾಹ್ಯ ಬೆಳವಣಿಗೆಯ ನಡುವೆ ಮಗುವಿನ ಅಂತರಂಗದ ಶಾಂತಿ ಮತ್ತು ಮಾನಸಿಕ ಸ್ವಾಸ್ತದ ಸ್ಥಿತಿಗತಿಗಳು ಕಡೆಗಣಿಸಲ್ಪಡುತ್ತಿವೆಯೇ? ಎಂಬ ಪ್ರಶ್ನೆ ಇಂದು ಗಂಭೀರವಾಗಿ ಅವಲೋಕಿಸಿಬೇಕಿದೆ.

ಇತ್ತೀಚಿನ ಅಂಕಿ ಅಂಶಗಳ ಪ್ರಕಾರ, ಶಾಲಾ ಹಂತದ ಮಕ್ಕಳಲ್ಲಿ ಒತ್ತಡ, ಆತಂಕ ಮತ್ತು ಖಿನ್ನತೆಯ ಲಕ್ಷಣಗಳು ನೂರ್ಮಡಿಸುತ್ತಿವೆ. ಇದು ಕೇವಲ ಒಂದು ಕುಟುಂಬದ ಸಮಸ್ಯೆಯಲ್ಲ, ಬದಲಿಗೆ ಆರೋಗ್ಯವಂತ ಸಮಾಜದ ನಿರ್ಮಾಣಕ್ಕೆ ಎದುರಾಗಿರುವ ಬೃಹತ್ ಸವಾಲಾಗಿದೆ. ಮಕ್ಕಳ ಮೇಲೆ ಒತ್ತಡ ಹೇರುವಲ್ಲಿ ಪ್ರಮುಖವಾಗಿ ಮೂರು ಅಂಶಗಳು ಕಾರ್ಯಗತವಾಗುತ್ತಿರುವ ಕಾರಣ ನಾವಿಂದು ಪುನರ್ ಮನನ ಮಾಡುವ ಅನಿವಾರ್ಯತೆಯು ಸೃಷ್ಟಿಸಿದೆ. ಒಂದೆಡೆ ಶೈಕ್ಷಣಿಕ ಸ್ಪರ್ಧೆಯಿಂದ ಅಂಕಗಳೇ ಜೀವನದ ಅಳತೆಗೋಲು ಎಂಬ ತಪ್ಪು ಕಲ್ಪನೆಯಿಂದಾದರೆ ಮತ್ತೊಂದು ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ವರ್ಚುವಲ್ ಜಗತ್ತಿನಲ್ಲಿ ಇತರರ ಜೀವನದೊಂದಿಗೆ ತಮ್ಮನ್ನು ಹೋಲಿಸಿಕೊಳ್ಳುವುದರಿಂದ ಹಾಗೆ ಇನ್ನೊಂದು




ಪ್ರಮುಖ ಕಾರಣವೆಂದರೆ ಸಂವಹನದ ಕೊರತೆ.

ಅವಿಭಕ್ತ ಕುಟುಂಬಗಳು ಮಾಯವಾಗಿ, ವಿಭಕ್ತ ಕುಟುಂಬಗಳಲ್ಲಿ ಪೋಷಕರು ಉದ್ಯೋಗದ ಒತ್ತಡದಲ್ಲಿ ಮಕ್ಕಳೊಂದಿಗೆ ಸಮಯ ಕಳೆಯಲು ಸಾಧ್ಯವಾಗದಿರುವುದು. ಮಕ್ಕಳ ಮಾನಸಿಕ ಆರೋಗ್ಯವನ್ನು ಸುಧಾರಿಸಲು ಕೇವಲ ಬೋಧನೆ ಸಾಲದು, ಅಲ್ಲಿ ಪ್ರೀತಿ ಮತ್ತು ವೈಜ್ಞಾನಿಕ ದೃಷ್ಟಿಕೋನದ ಸಮ್ಮಿಲನವಾಗಬೇಕು. ಮಕ್ಕಳಿಗೆ ಕೇವಲ ಗಣಿತ, ವಿಜ್ಞಾನ ಕಲಿಸಿದರೆ ಸಾಲದು, ತಮ್ಮ ಭಾವನೆಗಳನ್ನು (ಕೋಪ, ಬೇಸರ, ಭಯ ಆತಂಕ) ಹಂಚಿಕೊಳ್ಳುವ ಆತ್ಮೀಯತೆ ಮತ್ತು ಅದನ್ನು ಮುಕ್ತವಾಗಿ ವ್ಯಕ್ತಪಡಿಸಲು ಕಲಿಸಬೇಕು. ಸೋಲನ್ನು ಕೂಡ ಗೆಲುವಿನಷ್ಟೇ ಸಹಜವಾಗಿ ಸ್ವೀಕರಿಸುವ ಮನೋಭಾವ ಬೆಳೆಸಲು ಪೋಷಕರು ದಿನದಲ್ಲಿ ಕನಿಷ್ಠ ಅರ್ಧ ಗಂಟೆಯಾದರೂ ಮೊಬೈಲ್ ಪಕ್ಕಕ್ಕಿಟ್ಟು ಮಕ್ಕಳ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡಬೇಕು, ಆ ಸಮಯದಲ್ಲಿ ಯಾವುದೇ ಸಲಹೆ ನೀಡದೆ, ಅವರು ಹೇಳುವುದನ್ನು ಕೇವಲ ಆಲಿಸುವುದರಿಂದಲೇ ಮಗುವಿನ ಅರ್ಧದಷ್ಟು ಆತಂಕ ದೂರವಾಗುತ್ತದೆ.

ಹೋಲಿಕೆಯ ವಿಷವರ್ತುಲದಿಂದ ಮುಕ್ತಿ ಪ್ರತಿ ಮಗುವೂ ವಿಶಿಷ್ಟವಾದ ಪ್ರತಿಭೆಯನ್ನು ಹೊಂದಿರುತ್ತದೆ. "ಪಕ್ಕದ ಮನೆಯ ಮಗು 95% ಪಡೆದಿದೆ, ನೀನೇಕೆ ಪಡೆಯಲಿಲ್ಲ?" ಎಂಬ ಹೋಲಿಕೆ ಮಗುವಿನ ಆತ್ಮವಿಶ್ವಾಸವನ್ನು ಕುಗ್ಗಿಸುತ್ತದೆ. ಸಾಮರ್ಥ್ಯಕ್ಕೆ ತಕ್ಕಂತೆ ಪ್ರೋತ್ಸಾಹ ನೀಡುವುದು ಇಂದಿನ ಅಗತ್ಯ.

ಜೀವನ ಕೌಶಲಗಳ ಅಳವಡಿಕೆ ಕೇವಲ ಪರೀಕ್ಷೆಗಾಗಿ ಓದುವುದಕ್ಕಿಂತ, ಜೀವನದ ಸವಾಲುಗಳನ್ನು ಎದುರಿಸುವ 'ಲೈಫ್ ಸ್ಕಿಲ್ಸ್' ಬಗ್ಗೆ ಶಿಕ್ಷಣ ಸಂಸ್ಥೆಗಳು ಒತ್ತು ನೀಡಬೇಕು. ಯೋಗ, ಧ್ಯಾನ ಮತ್ತು ದೈಹಿಕ ಕ್ರೀಡೆಗಳು ಮೆದುಳಿನಲ್ಲಿ ಧನಾತ್ಮಕ ರಾಸಾಯನಿಕಗಳನ್ನು ಬಿಡುಗಡೆ ಮಾಡಿ ಒತ್ತಡವನ್ನು ತಗ್ಗಿಸುತ್ತವೆ. ಇಂದಿನ ಮಕ್ಕಳು ನಾಳೆಯ ಶ್ರೇಷ್ಠ ಪ್ರಜೆಗಳಾಗಲು ಇಂದಿನ ಅವರ ಮನಸ್ಸು ಮೃದುವಾದ ಮಣ್ಣಿನಂತಿದ್ದು, ಅಲ್ಲಿ ನಾವು ಒತ್ತಡದ ಬೀಜ ಬಿತ್ತದೆ, ಆತ್ಮವಿಶ್ವಾಸ ಮತ್ತು ಪ್ರೀತಿಯ ಸಸಿಯನ್ನು ನೆಡಬೇಕಿದೆ. ಪೋಷಕರು, ಶಿಕ್ಷಕರು ಮತ್ತು ಸಮಾಜ ಒಟ್ಟಾಗಿ ಶ್ರಮಿಸಿದರೆ ಮಾತ್ರ ಒಂದು 'ಒತ್ತಡ ಮುಕ್ತ' ತಲೆಮಾರನ್ನು ನಿರ್ಮಿಸಲು ಸಾಧ್ಯ. ಆದ್ದರಿಂದ ನಾವೆಲ್ಲ ನೆನಪಿಡಬೇಕಾದ ಒಂದು ಪ್ರಮುಖ ಸಂಗತಿ ಎಂದರೆ ಅಂಕದ ಪಟ್ಟಿಗಿಂತ ಮಗುವಿನ ಮುಗುಳ್ನಗೆಯು ಅನನ್ಯ, ಅಮೋಘ, ಅನಂತ.



ಪಾರ್ವತಿ ಎಸ್
ಬೂದೂರು.

# ಹಸಿವಿನ ಸಂತೆ



ಆ ವಿಶಾಲವಾದ ಮೈದಾನದ ತುಂಬೆಲ್ಲಾ ಬೆಳಗಿನ ಜಾವದ ಧೂಳು ಮತ್ತು ಮಂಜು ಮೈ ಎಪ್ಪತ್ತಿತ್ತು. ಸೂರ್ಯ ಇನ್ನೂ ಕಿರಣ ಚೆಲ್ಲಿರಲಿಲ್ಲ, ಅಷ್ಟರಲ್ಲೇ ಸಾವಿರಾರು ಮನುಷ್ಯರ ಉಸಿರಾಟದ ಹಬೆ ಆಕಾಶ ಮುಟ್ಟಿತ್ತು. ಇದು ಬರೀ ಮಣ್ಣಿನ ಮೈದಾನವಲ್ಲ, ನೂರಾರು ಹಳ್ಳಿಗಳ ಶ್ರಮಿಕರ ಹಣೆಬರಹ ಹರಾಜಾಗುವ ಅಖಾಡ. ಇಲ್ಲಿ ಪ್ರತಿ ಶುಕ್ರವಾರ ಬದುಕು ಗಿರವಿಗೆ ಬೀಳುತ್ತದೆ.

ಬಂಡಿ ಸಾಲು, ಟ್ರ್ಯಾಕ್ಟರ್‌ಗಳ ಅಬ್ಬರ, ಕುರಿಗಳ ಬ್ಯಾ.. ಬ್ಯಾ.. ಸದ್ದು ಎಲ್ಲವೂ ಸೇರಿ ಅದೊಂದು ವಿಚಿತ್ರ ರಣರಂಗದಂತೆ ಕಾಣುತ್ತಿತ್ತು. ಮೈದಾನದ ಪ್ರವೇಶ ದ್ವಾರದಲ್ಲೇ ಹಳೆ ಬಟ್ಟೆಗಳನ್ನು ರಾಶಿ ಹಾಕಿಕೊಂಡು ಕೂಗಾಡುತ್ತಿದ್ದ ದೃಶ್ಯವಂತೂ ಕರುಳು ಹಿಂಡುವಂತಿತ್ತು. "ತಗೋರಿಪ್ಪಾ ತಗೋರಿ, ಹತ್ತು ರೂಪಾಯಿಗೆ ಪ್ಯಾಂಟು, ಇಪ್ಪತ್ತಕ್ಕೆ ಶರಟು!" ಎಂದು ಕಿರುಚುತ್ತಿದ್ದ ಹಳೆ ಬಟ್ಟೆ ಮಾರುವವರ ಧ್ವನಿ ಸಂತೆಯ ಗದ್ದಲದಲ್ಲಿ ಮೇಳೈಸಿತ್ತು. ಶ್ರೀಮಂತರು ಬಳಸಿದು ಬಿಟ್ಟ ಆ ಬಣ್ಣಗೆಟ್ಟ ಬಟ್ಟೆಗಳಲ್ಲಿ ತಮ್ಮ ಮಾನ ಮುಚ್ಚಿಕೊಳ್ಳಲು ಬಡವರು ಮುಗಿಬಿದ್ದು ಆಯುತ್ತಿದ್ದರು.

ಹರಿದ ಕಿಶೆಗಳು, ಬಣ್ಣ ಮಾಸಿದ ಕಾಲರ್‌ಗಳು ಅಲ್ಲಿನ ಬಡತನಕ್ಕೆ ಸಾಕ್ಷಿಯಾಗಿದ್ದವು. ಅದರ ಪಕ್ಕದಲ್ಲೇ ರಸ್ತೆ ಬದಿಯ 'ದಂತ ದವಾಖಾನೆ'. ಒಂದು ಹಳೆಯ ಮರದ ಕುರ್ಚಿ, ಕೈಲೊಂದು ಇಕ್ಕಳ ಹಿಡಿದು ಕುಳಿತಿದ್ದ ಆ ನಾಟಿ ವೈದ್ಯ, ನೋವಿನಿಂದ ನರಳುತ್ತಿದ್ದ ಮುದುಕನ ಹಲ್ಲು ಕೀಳಲು ಹರಸಾಹಸ ಪಡುತ್ತಿದ್ದ. "ಸಮಾಧಾನ ಮಾಡ್ಕೋ ಮುತ್ಯಾ, ಈಗ ಬರ್ತದ ನೋಡು ಹೊರಗ," ಎಂದು ವೈದ್ಯ ಹಲ್ಲು ಕಡಿಯುತ್ತಿದ್ದರೆ, ಮುದುಕನ ಕಣ್ಣಲ್ಲಿ ನೀರು ಜಿನುಗುತ್ತಿತ್ತು. ಅಲ್ಲಿ ಅರಿವಳಿಕೆ ಇಲ್ಲ, ಸ್ವಚ್ಛತೆ ಇಲ್ಲ; ಕೇವಲ ಬಡವನ ಹಲ್ಲು ಮತ್ತು ಬದುಕಿನ ಅನಿವಾರ್ಯತೆಯ ನಡುವಿನ ಜಟಾಪಟಿ ಅದು. ಅಲ್ಲೇ ಪಕ್ಕದಲ್ಲಿ ಒತ್ತುವ ಗಾಡಿಯವನ ಗಂಟಲು ಹರಿಯುವ ಹಾಗಿತ್ತು.

"ಬರ್ರಿ ಬರ್ರಿ ಬರ್ರಿ! ಇಪ್ಪತ್ತ ಇಪ್ಪತ್ತ ಇಪ್ಪತ್ತ ರೂ.ಗೆ ಕಿಲೋ ಉಳ್ಳಾಗಡ್ಡಿ! ಮತ್ ಸಿಗಾಂಗಿಲ್ಲ ಬರ್ರಿ! ಅಪ್ಪಟ ನಾಟಿ ಉಳ್ಳಾಗಡ್ಡಿ ಬರ್ರಿ!" ಎಂದು ಆತ ಲಯಬದ್ಧವಾಗಿ ಕೂಗುತ್ತಿದ್ದ. ಅವನ ಗಾಡಿಯ ಸುತ್ತ ಜನವೋ ಜನ. ತರಕಾರಿ ಬುಟ್ಟಿಗಳನ್ನು ತಲೆಯ ಮೇಲೆ ಇಟ್ಟುಕೊಂಡ ಹೆಣ್ಣುಮಕ್ಕಳು ಒಬ್ಬರಿಗೊಬ್ಬರು ತಳ್ಳಾಡುತ್ತಾ, "ನನಗೊಂದು ಐದು ಕಿಲೋ ಹಾಕು," "ನನಗೆ ಮೊದಲು ಕೊಡು," ಎಂದು ಕಿರುಚುತ್ತಿದ್ದರು. ಉಳ್ಳಾಗಡ್ಡಿ ಗಾಡಿಯವನ ಕೈ ಮತ್ತು ತಕ್ಕಡಿ ಗಾಳಿಯಲ್ಲಿ ನೃತ್ಯ ಮಾಡುತ್ತಿದ್ದವು. "ಯಾವಲೇ ನೀನು ನನಗಿಂತ ಮೊದಲು ಕೈ ಹಾಕೋನು? ತಡಿ ಸ್ವಲ್ಪ," ಎಂದು ಗೃಹಿಣಿಯರ ಜಗಳ ಅಲ್ಲಿ ನಿರಂತರವಾಗಿತ್ತು. ಸ್ವಲ್ಪ ಮುಂದೆ ಹೋದರೆ ಬಳ್ಳೊಳ್ಳಿ (ಬೆಳ್ಳುಳ್ಳಿ) ಮಾರುವ ಗಾಡಿಗಳು ಸಾಲುಗಟ್ಟಿ ನಿಂತಿದ್ದವು. ಗಾಳಿಯಲ್ಲಿ ಬೆಳ್ಳುಳ್ಳಿಯ ಆ ಖಾರವಾದ ವಾಸನೆ ಹರಡಿತ್ತು. ಬಳ್ಳೊಳ್ಳಿಯ ಸಿಪ್ಪೆಗಳು ಧೂಳಿನೊಂದಿಗೆ ಹಾರುತ್ತಾ ಜನರ ಕಣ್ಣಿಗೆ ಬಡಿಯುತ್ತಿದ್ದವು.

ಅದರ ಪಕ್ಕದಲ್ಲೇ ಎಣ್ಣೆಯಲ್ಲಿ ಕರಿಯುತ್ತಿದ್ದ ಬಜ್ಜಿಗಳ ಘಮಲು. ಕಾದ ಎಣ್ಣೆಯಲ್ಲಿ ಬಜ್ಜಿಗಳು 'ಬುಸುಬುಸು' ಎಂದು ಬೇಯುತ್ತಿದ್ದರೆ, ಹಸಿದ ಹೊಟ್ಟೆಗಳು ಆ ಬಜ್ಜಿ ಅಂಗಡಿಯ ಮುಂದೆ ಸಾಲುಗಟ್ಟಿದ್ದವು. ಐದು ರೂಪಾಯಿಗೆ ಎರಡು ಬಜ್ಜಿ, ಜೊತೆಗೆ ಸ್ವಲ್ಪ ಖಾರಾ ಹಚ್ಚಿದ ಉಪ್ಪಿನಕಾಯಿ?ಅದೇ ಆ ದಿನದ ಬಹುತೇಕರ ರಾಜಭೋಜನ. ಆ ಬಜ್ಜಿಯ ಘಮಲು ಸಂತೆಯ ಎಲ್ಲ ಕೊಳಕು ವಾಸನೆಯನ್ನು ಮರೆಸಿಬಿಡುವಂತಿತ್ತು. ಕರೆಪ್ಪ ತನ್ನ 'ಕಾಟೇರ' ಟಗರಿನ ಹಗ್ಗವನ್ನು ಗಟ್ಟಿಯಾಗಿ ಹಸ್ತಕ್ಕೆ ಸುತ್ತಿದ್ದ. ಕಾಟೇರ ಕರೆಪ್ಪನಿಗೆ ಬರೀ ಪ್ರಾಣಿಯಾಗಿರಲಿಲ್ಲ, ಅವನ ಒಂಟಿ ಬದುಕಿನ ಜೀವದ ಗೆಳೆಯ. ಅವನ ಬೆವರಿನ ಶಕ್ತಿಯೇ ಆ ಟಗರು. ಕರೆಪ್ಪನ ಕಣ್ಣುಗಳಲ್ಲಿ ಒಂದು ಬಗೆಯ ತಳಮಳವಿತ್ತು. ಅತ್ತ ಹೊಲದಲ್ಲಿ ಕಾಯುತ್ತಿದ್ದ ಸ್ನೇಹಾಳ ಮಾತುಗಳು ಅವನ ಕಿವಿಯಲ್ಲಿ ಗುಂಯ್ ಎನ್ನುತ್ತಿದ್ದವು.

"ಕರಿಯಾ, ಈ ಸಲನೂ ಜಾತ್ರೆಗೆ ಬರಿ ಕೈಲೇ ಬರ್ತೀಯಾ ಏನ? ನಮ್ಮಪ್ಪ ಈ ಮ್ಯಾಲೆ ಬೇರೆ ಕಡೆ ಕಣ್ಣು ಹಾಕಿದ್ದಾನೆ, ಹುಷಾರು!" ಅಂದಿದ್ದಳು. ಸ್ನೇಹಾಳ ಆ ಮಾತುಗಳೇ ಕರೆಪ್ಪನನ್ನು ಈ ಸಂತೆಗೆ ಎಳೆದು ತಂದಿದ್ದವು. ಅಷ್ಟರಲ್ಲಿ ತಂಬಾಕು ಕುಟ್ಟುತ್ತಾ ರಾಯಪ್ಪ ಮತ್ತು ಮುದಕಪ್ಪ ಕರೆಪ್ಪನ ಹತ್ತಿರ ಬಂದರು. "ಏನೋ ಕರೆಪ್ಪಾ, ಮುಖ ಯಾಕೋ ಹಳದಿ ಬಿದ್ದಂಗೆ ಆಗ್ಯೆತಲ್ಲೋ? ಸಂತೆ ಅಂದರ ಹುರುಪು ಇರಬಾರದೇನೋ? ಮಂದಿ ಎಲ್ಲಾ ಬಾಳ ಬಂದಾರ ನೋಡು," ಎಂದು ರಾಯಪ್ಪ ಕೇಳಿದಾಗ ಕರೆಪ್ಪನ ಎದೆ ಭಾರವಾಯಿತು. "ರಾಯಪ್ಪಾ ಸೌಕಾರ್ರೆ, ಈ ಕಾಟೇರನ್ನ ಮಾರೋಕೆ ಜೀವ ಬರ್ತಿಲ್ಲ ನೋಡಿ. ಮನ್ಯಾಗ ಮಗನಿದ್ದ ಹಂಗೆ ಇತ್ತು ಇದು. ಇವತ್ತು ಯಾವನೋ ಕಟುಕನ ಕೈಗೆ ಕೊಡಬೇಕಲ್ಲ ಅನ್ನೋ ನೋವು ತಿನ್ನುತ್ತೈತಿ," ಅಂದ ಕರೆಪ್ಪ. ಮುದಕಪ್ಪ ನಗುತ್ತಾ ಅಂದ, "ಹುಚ್ಚ ಮಗನೇ, ಇದೇನಾರಾ ಮನ್ಯಾಗ ಇಟ್ಕೊಳ್ಳೋ ವಸ್ತುವೇನ? ಇದು ಸಂತೆ, ಇಲ್ಲಿ ವ್ಯಾಪಾರ ಆಗಲೇಬೇಕು.

ನೋಡ ತಮ್ಮಾ, ಈ ಪ್ರಪಂಚದಲ್ಲಿ ಮನುಷ್ಯರಿಗಿಂತ ಮೃಗಗಳೇ ಹೆಚ್ಚು. ಕಣ್ಣು ಮುಚ್ಚಿ ಬಿಡುವುದರೊಳಗೆ ಜೇಬಿಗೆ ಕತ್ತರಿ ಹಾಕ್ತಾರ. ಸ್ನೇಹಾಳ ಓಲೆ ಬೇಕೋ ಇಲ್ಲ ಕಾಟೇರ ಬೇಕೋ ನೀನೇ ತೀರ್ಮಾನ ಮಾಡ್ಕೋ. ಈ ಉಳ್ಳಾಗಡ್ಡಿ ಗಾಡಿ ತರಹ ನಮ್ಮ ಬದುಕೂ ಒಂದೊಂದು ಎಸಳಾಗಿ ಉದುರಿ ಹೋಗಬಾರದು ಅಂದ್ರೆ ಕೈಯಲ್ಲಿ ಕಾಸು ಇರಬೇಕು. ಈ ಕಸದ ರಾಶಿ ನೋಡಿದ್ಯಾ? ಇಲ್ಲಿ ಬಡವನ ಬದುಕು ಕೂಡ ಹೀಗೆಯೇ ಕೆಸರಾಗಿ ಹೋಗ್ತದ, ಎಚ್ಚರ!" ಬಿಸಿಲು ಏರುತ್ತಿದ್ದಂತೆ ದಲ್ಲಾಳಿಗಳಾದ ರಂಗಪ್ಪ ಮತ್ತು ರಾಮಪ್ಪ ಅಲ್ಲಿಗೆ ಪ್ರತ್ಯಕ್ಷರಾದರು. ರಂಗಪ್ಪ ಮುಂದೆ ಬಂದು ಕಾಟೇರನ ಹಲ್ಲುಗಳನ್ನು ಪರೀಕ್ಷಿಸುವ ನಾಟಕವಾಡಿ, "ಏ ತಮ್ಮಾ, ಈ ಕುರಿ ಯಾಕೋ ತಿನ್ನಾಕ ಲಾಯಕ್ಕಿಲ್ಲ ಬಿಡು.

ಮುಪ್ಪಾದ ಹಂಗ ಕಾಣತೈತಿ," ಎಂದು ಸುಳ್ಳು ಹೇಳಲು ಶುರು ಮಾಡಿದ. ಕರೆಪ್ಪ ತಟ್ಟನೆ ಎದ್ದು ನಿಂತು ಗುಡುಗಿದ, "ಏನೋ ಸೌಕಾರ್ರೆ, ಮಾತಾಡೋದು ನೋಡಿ! ಇದು ಅಪ್ಪಟ ದೇಶಿ ತಳಿ. ಸುಮ್ನೆ ಮಂಕುಬೂದಿ ಎರಚಬೇಡಿ! ನಿಮಗೇನು ಗೊತ್ತು ಇದರ ಕಿಮ್ಮತ್ತು? ಬಂದಾರ ಹೋಗಾರ ಬಾಳ ಮಂದಿ ಕಂಡೀನಿ ನಿಮ್ಮಂತವರನ್ನ! ತಿನ್ನಾಕ ಲಾಯಕ್ಕಿಲ್ಲ ಅಂದ್ರೆ ನಿಮ್ಮ ಮನೆಯ ದಾರಿಗೆ ಹೋಗಾರಿಗೆ ಕೇಳಿ ಇದರ ಕರಾಮತ್ತು!" ವ್ಯಾಪಾರ ಕುದುರಿಸುವ ಭರದಲ್ಲಿ ದಲ್ಲಾಳಿಗಳು ಕೈಚಳಕ ಮಾಡಿ ಕರೆಪ್ಪನಿಗೆ ಬಣ್ಣದ ಕಾಗದದ ಕಂತೆಯನ್ನು ಕೈಗಿಟ್ಟರು. "ಅಲ್ಲಿ ನೋಡಿ, ಆ ತರಕಾರಿ ಬುಟ್ಟಿ ಇಟ್ಕೊಂಡವಳು ಬಿದ್ದೋದಳು!" ಎಂದು ರಾಮಪ್ಪ ಕಿರುಚಿದಾಗ ಕರೆಪ್ಪನ ಗಮನ ತಪ್ಪಿತು. ಅಷ್ಟರಲ್ಲೇ ಅಸಲಿ ನೋಟುಗಳ ಬದಲಿಗೆ ಬಣ್ಣದ ಕಾಗದದ ಕಂತೆಯನ್ನು ಕೈಗಿಟ್ಟರು. ಕಾಟೇರನನ್ನು ಅವರು ಲಾರಿಗೆ ಎಳೆದುಕೊಂಡು ಹೋದಾಗ, ಕಾಟೇರ ಒಂದು ಕ್ಷಣ ತಿರುಗಿ ಕರೆಪ್ಪನನ್ನು ನೋಡಿತು. ಅದರ ಕಣ್ಣಲ್ಲಿ ಅಸಹಾಯಕತೆ ಮತ್ತು ಅಗಲಿಕೆಯ ಕಣ್ಣೀರಿತ್ತು. ಸಂಜೆ ವೇಳೆ ಕೆರೆಯ ಬದಿಯಲ್ಲಿ ಕುಳಿತು ಹಣ ಎಣಿಸಿದಾಗ ಕರೆಪ್ಪನ ಜಗತ್ತು ಕತ್ತಲಾಗಿ ಹೋಯಿತು.

ನಡುವೆ ಕೇವಲ ಬಿಳಿ ಕಾಗದಗಳು ಮತ್ತು ಬಣ್ಣದ ಚೂರುಗಳು! "ಭಗವಂತಾ, ನನಗೆ ಯಾಕೆ ಇಂಥ ಶಿಕ್ಷೆ? ನಾನು ಯಾರಿಗೂ ದ್ರೋಹ ಮಾಡಿಲ್ಲವಲ್ಲ?" ಎಂದು ಕೂಗಾಡಿದ. ಅವನ ಕಿರುಚಾಟಕ್ಕೆ ಕೆರೆಯ ಹಕ್ಕಿಗಳು ಬೆದರಿ ಹಾರಿದವು. ಮನೆಗೆ ಹಿಂದಿರುಗುವಾಗ ಸ್ನೇಹಾ ದಾರಿಯಲ್ಲೇ ನಿಂತಿದ್ದಳು. ಅವಳು ಇವನ ಮುಖ ನೋಡಿಯೇ ಎಲ್ಲವನ್ನೂ ಅರ್ಥ ಮಾಡಿಕೊಂಡಳು. ಆದರೆ ಕರೆಪ್ಪನ ಒಳಗಿದ್ದ ಬಂಡಾಯದ ಕಿಚ್ಚು ಆರಿರಲಿಲ್ಲ. ಅಂದು ರಾತ್ರಿ ಊರ ಹೊರವಲಯದಲ್ಲಿ ಲಾರಿಯೊಂದು ನಿಂತಿತ್ತು. ಕತ್ತಲಲ್ಲಿ ಲಾರಿಯ ಲೈಟುಗಳು ದೆವ್ವದ ಕಣ್ಣುಗಳಂತೆ ಕಾಣುತ್ತಿದ್ದವು. ರಂಗಪ್ಪ ಮತ್ತು ರಾಮಪ್ಪ ಮದ್ಯ ಕುಡಿಯುತ್ತಾ ಕುಳಿತಿದ್ದರು.

ಕರೆಪ್ಪ ಹತ್ತಿರ ಹೋಗಿ ಹಣದ ಕಂತೆಯನ್ನು ಅವರ ಮುಖಕ್ಕೆ ಎಸೆದ. "ಬಡವನ ಹೊಟ್ಟೆ ಹೊಡೆದು ಬಂಗಲೆ ಕಟ್ಟೋ ನೀವು ಮನುಷ್ಯರಾ? ಈ ಕುರಿಗಳಿಗಿರೋ ಸಂವೇದನೆ ಕೂಡ ನಿಮಗಿಲ್ಲ," ಎಂದು ಗುಡುಗಿದ. ರಂಗಪ್ಪ ಅಹಂಕಾರದಿಂದ ಅಂದ, "ಯಾರಲೇ ನೀನು? ನಮಗೆ ಬುದ್ಧಿ ಹೇಳಾಕ ಬಂದೀಯೇನೋ? ಮುಚ್ಚಕೊಂಡು ಹೋಗು ಇಲ್ಲಿಂದ, ಇಲ್ಲಾಂದ್ರೆ ನಿನ್ನನ್ನು ಈ ಉಳ್ಳಾಗಡ್ಡಿ ತರಹ ಸೀಳಿ ಬಿಡ್ತೇವಿ." ಕರೆಪ್ಪನ ರಕ್ತ ಕುದಿಯಿತು. ಇಡೀ ಊರೇ ನಡುಗುವಂತೆ ಅಬ್ಬರಿಸಿದ, "ಎದಿಗೆ ಒದಿಲೇನ ಮಗನ... ಮುಚ್ಚಕೊಂಡು ಹೋಗ ಯಾವಲೇ ನೀ! ನನ್ನ ಬೆವರಿನ ಬೆಲೆ ತಗೊಂಡು ನನಗೇ ಬೆದರಿಕೆ ಹಾಕ್ತಿಯಾ? ನಿನ್ನಂತವರು ಬಾಳ ಬಂದಾರ ಹೋಗಾರ, ಈ ಕರಿಯನ್ನ ಮುಟ್ಟೋ ಗಂಡಸು ಇನ್ನು ಹುಟ್ಟಿಲ್ಲ! ತಿನ್ನಾಕ ಅನ್ನ ಇಲ್ಲದಿದ್ದರೂ ಪರವಾಗಿಲ್ಲ, ನಿನ್ನಂತ ಕಟುಕರಿಗೆ ಬೆನ್ನು ತೋರಿಸಲ್ಲ ಮಗನ!" ಗಲಾಟೆ ಶುರುವಾಯಿತು. ಕರೆಪ್ಪ ದೊಣ್ಣೆಯಿಂದ ಲಾರಿಯ ಬಾಗಿಲನ್ನು ಹೊಡೆದು ಪುಡಿ ಮಾಡಿದ. ಲಾರಿಯ ಒಳಗಿಂದ ಕಾಟೇರ ಬಲವಾಗಿ ಗುದ್ದಿ ಹೊರಗೆ ಬಂದಿತು. ಯಜಮಾನ ಮತ್ತು ಪ್ರಾಣಿಯ ನಡುವಿನ ಆ ಸಂಬಂಧ ಕಂಡು ದಲ್ಲಾಳಿಗಳ ಮೈ ನಡುಗಿತು.

"ಹೋಗಿಬಿಡಿ ಇಲ್ಲಿಂದ! ಈ ಮಣ್ಣು ನಿಮಗಲ್ಲ," ಎಂದು ಕರೆಪ್ಪ ಅಬ್ಬರಿಸಿದಾಗ ದಲ್ಲಾಳಿಗಳು ಪ್ರಾಣ ಉಳಿಸಿಕೊಳ್ಳಲು ಲಾರಿ ಬಿಟ್ಟು ಓಡಿಹೋದರು. ರಾತ್ರಿ ಹನ್ನೆರಡು ಗಂಟೆಗೆ ಕರೆಪ್ಪ, ಸ್ನೇಹಾ ಮತ್ತು ಕಾಟೇರ ಒಟ್ಟಾಗಿ ಊರ ಹಾದಿಯಲ್ಲಿ ನಡೆಯುತ್ತಿದ್ದರು. ಅಂದು ಹಸಿವಿನ ಸಂತೆ ಕೇವಲ ವ್ಯಾಪಾರವನ್ನು ಮುಗಿಸಿರಲಿಲ್ಲ, ಒಬ್ಬ ಮನುಷ್ಯನ ಅಂತರಂಗದ ಶಕ್ತಿಯನ್ನು ಎಚ್ಚರಿಸಿತ್ತು. ಮಾನವೀಯತೆ ಮತ್ತು ಪ್ರೀತಿಯ ಮುಂದೆ ಕೋಟಿ ರೂಪಾಯಿಗಳ ವ್ಯವಹಾರವೂ ಶೂನ್ಯ ಎಂಬ ಸತ್ಯ ಆ ಕರಾಳ ರಾತ್ರಿಯ ನಂತರದ ಬೆಳಗಿನ ಸೂರ್ಯನಂತೆ ಪ್ರಕಾಶಮಾನವಾಗಿ ಹೊರಹೊಮ್ಮಿತು.



ಡಾ.ವೆಂಕಟೇಶ ಗುಡೆಪ್ಪನವರ ಉತ್ತೂರ
ತಾ.ಮುಧೋಳ ಜಿ.ಬಾಗಲಕೋಟೆ
ಮೋ.9902457371

# ಸಂಭಲ್ ಹಿಂಸಾಚಾರ: ಮುಲ್ಲಾ ಅಫ್ರೋಜ್ ಮೇಲಿನ ಎನ್‌ಎಸ್‌ಎ ಬಂಧನ ರದ್ದು; ಯುಪಿ ಸರ್ಕಾರಕ್ಕೆ 10 ಲಕ್ಷ ದಂಡ

ಅ.ಶ. ಸುದ್ದಿ ನವದೆಹಲಿ

**ನವದೆಹಲಿ:** ಸಂಭಲ್ ಹಿಂಸಾಚಾರ ಪ್ರಕರಣದ ಆರೋಪಿ ಮುಲ್ಲಾ ಅಫ್ರೋಜ್ ವಿರುದ್ಧ ಉತ್ತರ ಪ್ರದೇಶ ಸರ್ಕಾರ ವಿಧಿಸಿದ್ದ ರಾಷ್ಟ್ರೀಯ ಭದ್ರತಾ ಕಾಯ್ದೆ (ಎನ್‌ಎಸ್‌ಎ) ಅಡಿ ಬಂಧನ ಆದೇಶವನ್ನು ಸುಪ್ರೀಂಕೋರ್ಟ್ ಇಂದು ರದ್ದುಗೊಳಿಸಿದೆ. ಅಲ್ಲದೆ, ಕಾನೂನುಬಾಹಿರವಾಗಿ ಮುನ್ನೆಚ್ಚರಿಕೆ ಬಂಧನ ಆದೇಶ ಹೊರಡಿಸಿದ್ದಕ್ಕಾಗಿ ಉತ್ತರ ಪ್ರದೇಶ ಸರ್ಕಾರಕ್ಕೆ ?10 ಲಕ್ಷ ದಂಡ ವಿಧಿಸಿದೆ.




ನ್ಯಾಯಮೂರ್ತಿ ದೀಪಂಕರ್ ದತ್ತ ಮತ್ತು ನ್ಯಾಯಮೂರ್ತಿ ಶೀಲ್ ನಾಗು ಅವರನ್ನೊಳಗೊಂಡ ದ್ವಿಸದಸ್ಯ ಪೀಠವು, ಪೊಲೀಸ್ ಕಸ್ಟಡಿಯಲ್ಲಿದ್ದಾಗ ಆರೋಪಿ ನೀಡಿದ ತಪ್ಪೊಪ್ಪಿಗೆ ಹೇಳಿಕೆಯನ್ನು ಬಂಧನಕ್ಕೆ ಏಕೈಕ ಆಧಾರವನ್ನಾಗಿ ಬಳಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿತು. ಅಂತಹ ಹೇಳಿಕೆಯನ್ನು ಆಧರಿಸಿ ಎನ್‌ಎಸ್‌ಎ ಅಡಿ ಮುನ್ನೆಚ್ಚರಿಕೆ ಬಂಧನ ವಿಧಿಸಲು ಸಾಧ್ಯವಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಈ ಹಿಂದೆ ಯುಪಿ ಸರ್ಕಾರದ ಎನ್‌ಎಸ್‌ಎ ಬಂಧನ ಆದೇಶವನ್ನು ಎತ್ತಿಹಿಡಿದಿದ್ದ ಅಲಹಾಬಾದ್ ಹೈಕೋರ್ಟ್‌ನ ತೀರ್ಪನ್ನೂ ಸುಪ್ರೀಂಕೋರ್ಟ್ ರದ್ದುಗೊಳಿಸಿದೆ. ಉತ್ತರ ಪ್ರದೇಶದ ಸಂಭಲ್‌ನ ಶಾಹಿ ಜಾಮಾ ಮಸೀದಿ ಸಮೀಕ್ಷೆಯ ಸಂದರ್ಭದಲ್ಲಿ 2024ರ ನವೆಂಬರ್‌ನಲ್ಲಿ ಭಾರಿ ಹಿಂಸಾಚಾರ ಭುಗಿಲೆದ್ದಿತ್ತು. ಈ ಪ್ರಕರಣದಲ್ಲಿ ಮುಲ್ಲಾ ಅಫ್ರೋಜ್ ಪ್ರಮುಖ ಸಂಚುಕೋರ ಎಂದು ಆರೋಪಿಸಲಾಗಿತ್ತು.

ಪ್ರಕರಣದಲ್ಲಿ ಮುಲ್ಲಾ ಅಫ್ರೋಜ್‌ಗೆ ಅಲಹಾಬಾದ್ ಹೈಕೋರ್ಟ್ ಜಾಮೀನು ನೀಡಿತ್ತು. ಆದರೆ, ಆತ ಬಿಡುಗಡೆಯಾದರೆ ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆಯಾಗಬಹುದು ಎಂಬ ಕಾರಣ ನೀಡಿ, ಉತ್ತರ ಪ್ರದೇಶ ಸರ್ಕಾರ 2025ರ ಅಕ್ಟೋಬರ್ 13ರಂದು ಆತನ ವಿರುದ್ಧ ಎನ್‌ಎಸ್‌ಎ ಪ್ರಯೋಗಿಸಿ ಮತ್ತೆ ಬಂಧಿಸಿತ್ತು. ಪೊಲೀಸ್ ಕಸ್ಟಡಿಯಲ್ಲಿದ್ದಾಗ ನೀಡಿದ್ದ ಹೇಳಿಕೆಯನ್ನು ಆಧರಿಸಿ, ಘಟನೆ ನಡೆದ ಸುಮಾರು 54 ದಿನಗಳ ಬಳಿಕ ಎನ್‌ಎಸ್‌ಎ ಅಡಿ ಬಂಧನ ವಿಧಿಸಿರುವುದನ್ನು ಸುಪ್ರೀಂಕೋರ್ಟ್ ಪ್ರಶ್ನಿಸಿತು.

ತೀರ್ಪು ಪ್ರಕಟಿಸುವ ವೇಳೆ ನ್ಯಾಯಾಲಯದಲ್ಲಿ ಅಪರೂಪದ ಭಾವನಾತ್ಮಕ ವಾತಾವರಣ ನಿರ್ಮಾಣವಾಗಿತ್ತು. ನ್ಯಾಯಮೂರ್ತಿ ದೀಪಂಕರ್ ದತ್ತ ಅವರು ತಮ್ಮ 27ನೇ ಹುಟ್ಟುಹಬ್ಬದ ಕೆಲವೇ ದಿನಗಳ ಮೊದಲು ನಿಧನರಾದ ತಮ್ಮ ಕಾನೂನು ಗುಮಾಸ್ತ ರಿತ್ವಿಕ್ ದೇಶ್ವಾಲ್ ಅವರಿಗೆ ತೀರ್ಪನ್ನು ಅರ್ಪಿಸಿದರು. ಈ ತೀರ್ಪಿನ ಸಂಶೋಧನೆ ಮತ್ತು ಸಿದ್ಧತೆಯಲ್ಲಿ ರಿತ್ವಿಕ್ ಅವರ ಶ್ರಮ ಮಹತ್ವದ್ದಾಗಿತ್ತು ಎಂದು ನ್ಯಾಯಮೂರ್ತಿಗಳು ಹೇಳಿದರು.

# ಸಂಪುಟ ವಿಸ್ತರಣೆ : ಮೂವರಲ್ಲಿ ಇಬ್ಬರಿಗೆ ಅದೃಷ್ಟ 'ಗ್ಯಾರಂಟಿ'..

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ದೆಹಲಿಯಲ್ಲಿ ಕಾಂಗ್ರೆಸ್ ನಾಯಕರೊಂದಿಗೆ ರಾಜ್ಯ ಸಚಿವ ಸಂಪುಟ ವಿಸ್ತರಣೆ ಕುರಿತು ಮಹತ್ವದ ಚರ್ಚೆ ನಡೆಸಿದ್ದು, ಸಂಪುಟದಲ್ಲಿ ಖಾಲಿ ಇರುವ ಸ್ಥಾನಗಳಿಗೆ ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳಿಗೆ ಚುನಾವಣೆ ಮುಗಿದ ಬಳಿಕ ನಿಯೋಜನೆ ಮಾಡುವ ಸಾಧ್ಯತೆ ಇದೆ.**



ಖಾಲಿ ಇರುವ ಎರಡು ಸ್ಥಾನಗಳ ಪೈಕಿ ಒಂದನ್ನು ಪರಿಶಿಷ್ಟ ಪಂಗಡ ಹಾಗೂ ಮತ್ತೊಂದು ಸ್ಥಾನವನ್ನು ಕುರುಬ ಸಮುದಾಯಕ್ಕೆ ಮೀಸಲಿಡಲಾಗಿದೆ. ಈ ನಡುವೆ ಹಿರಿಯ ಶಾಸಕರ ಒತ್ತಡಕ್ಕೆ ಮಣಿದು ಬದಲಾವಣೆ ಮಾಡುವ ಸಾಧ್ಯತೆಗಳ ಬಗ್ಗೆ ಕೂಡ ಚರ್ಚೆಗಳಾಗಿವೆ. ಈವರೆಗಿನ ಮಾಹಿತಿ ಪ್ರಕಾರ ಪರಿಶಿಷ್ಟ ಪಂಗಡದ ಕೋಟಾದ ಸ್ಥಾನಕ್ಕೆ ಸಂಡೂರು ಕ್ಷೇತ್ರದ ಶಾಸಕಿ ಅನ್ನಪೂರ್ಣ ತುಕಾರಾಂ ಅವರ ಹೆಸರು ಬಹುತೇಕ ಖಚಿತವಾಗಿದೆ. ಇದೇ ವೇಳೆ ಕುರುಬ ಸಮುದಾಯದಿಂದ ಹಾವೇರಿ ಜಿಲ್ಲೆಯ ಬ್ಯಾಡಗಿ ಕ್ಷೇತ್ರದ ಶಾಸಕ ಬಸವರಾಜ ಶಿವಣ್ಣನವರ್ ಅವರನ್ನು ಸಂಪುಟಕ್ಕೆ ಸೇರ್ಪಡೆಗೊಳಿಸುವ ಸಾಧ್ಯತೆ ಹೆಚ್ಚಿದೆ ಎನ್ನಲಾಗಿದೆ. ಈ ನಡುವೆ ಮಾಜಿ ಸಚಿವ ಎಂ. ಕೃಷ್ಣಪ್ಪ ಅವರು ತಮಗೆ ಸಚಿವ ಸ್ಥಾನ ನೀಡಲೇಬೇಕು ಎಂದು ಪಟ್ಟು ಹಿಡಿದಿದ್ದಾರೆ.

ಇಲ್ಲವಾದರೆ ತಮಗೆ ಪುತ್ರ ಹಾಗೂ ಶಾಸಕ ಪ್ರಿಯಕೃಷ್ಣ ಅವರಿಗಾದರೂ ಸಚಿವ ಸ್ಥಾನ ನೀಡಬೇಕು ಎಂದು ಅವರು ಒತ್ತಾಯಿಸಿದ್ದಾರೆ. ಪ್ರಸ್ತುತ ಪ್ರಿಯಕೃಷ್ಣ ಅವರು ದೆಹಲಿಯಲ್ಲೇ ಉಳಿದು ಸಚಿವ ಸ್ಥಾನಕ್ಕಾಗಿ ವರಿಷ್ಠರ ಮಟ್ಟದಲ್ಲಿ ಪ್ರಯತ್ನ ನಡೆಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ಹಿಂದೆ ವಿಧಾನ ಪರಿಷತ್ ಸದಸ್ಯೆ ಗಾಯತ್ರಿ ಶಾಂತೇಗೌಡ ಅವರ ಹೆಸರು ಕೂಡ ಸಂಪುಟ ವಿಸ್ತರಣೆಯ ಸಂದರ್ಭದಲ್ಲಿ ಪ್ರಸ್ತಾಪವಾಗಿತ್ತು. ಆದರೆ ಬಸವರಾಜ ಶಿವಣ್ಣನವರ್ ಅವರ ಹೆಸರನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮುನ್ನೆಲೆಗೆ ತಂದಿದ್ದಾರೆ. ತಾವು ಸೂಚಿಸಿದವರ ಬದಲಿಗೆ ಬೇರೆ ಶಾಸಕರಿಗೆ ಅವಕಾಶ ನೀಡುವ ವಿಚಾರದಲ್ಲಿ ಸಿದ್ದರಾಮಯ್ಯ ಅವರು ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದರು.

ಮಹಿಳಾ ಕೋಟಾದಡಿ ಹಲವು ಶಾಸಕರ ಹೆಸರುಗಳು ಚರ್ಚೆಯಲ್ಲಿದ್ದರೂ, ಲಕ್ಷ್ಮೀ ಹೆಬ್ಬಾಳ್ಕರ್ ಅವರ ಹೆಸರು ಮುಂಚೂಣಿಯಲ್ಲಿತ್ತು. ನಯನಾ ಮೋಟಮ್ಮ ಕೂಡ ಸಚಿವ ಸ್ಥಾನಕ್ಕಾಗಿ ಪೈಪೋಟಿ ನಡೆಸಿದ್ದರು. ಈ ನಡುವೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಬಿ. ನಾಗೇಂದ್ರ ಅವರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರುವುದರಿಂದ ತೆರವಾಗಿರುವ ಸ್ಥಾನವನ್ನು ಅದೇ ಸಮುದಾಯಕ್ಕೆ ನೀಡಬೇಕು ಎಂಬ ಒತ್ತಾಯವೂ ಕೇಳಿಬಂದಿದೆ.

ಮಹಿಳಾ ಪ್ರಾತಿನಿಧ್ಯ, ಪರಿಶಿಷ್ಟ ಪಂಗಡದ ಕೋಟಾ ಹಾಗೂ ಬಳ್ಳಾರಿ ಜಿಲ್ಲೆಗೆ ಪ್ರಾತಿನಿಧ್ಯ ನೀಡುವ ಉದ್ದೇಶದಿಂದ ಸಂಡೂರು ಶಾಸಕಿ ಅನ್ನಪೂರ್ಣ ತುಕಾರಾಂ ಅವರ ಹೆಸರನ್ನು ಪರಿಗಣಿಸಲಾಗುತ್ತಿದೆ ಎನ್ನಲಾಗಿದೆ. ಅನ್ನಪೂರ್ಣ ತುಕಾರಾಂ ಅವರು ಮೊದಲ ಬಾರಿಗೆ ಶಾಸಕರಾಗಿದ್ದರೂ, ಮಹಿಳಾ ಪ್ರಾತಿನಿಧ್ಯಕ್ಕೆ ಒತ್ತು ನೀಡಬೇಕು ಹಾಗೂ ಪ್ರಾದೇಶಿಕ ಮತ್ತು ಸಾಮಾಜಿಕ ಸಮತೋಲನ ಕಾಪಾಡಬೇಕು ಎಂಬ ಕಾರಣಕ್ಕೆ ಅವರ ಹೆಸರನ್ನು ಪರಿಗಣಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಸಚಿವ ಸಂಪುಟಕ್ಕೆ ಸೇರ್ಪಡೆಯಾಗಲು 30ಕ್ಕೂ ಹೆಚ್ಚು ಶಾಸಕರು ವಿವಿಧ ಹಂತಗಳಲ್ಲಿ ಪ್ರಯತ್ನ ನಡೆಸುತ್ತಿದ್ದಾರೆ. ಕೆಲವರು ದೆಹಲಿಯಲ್ಲಿ ತಂಗಿದ್ದು, ಮುಖ್ಯಮಂತ್ರಿ ಮತ್ತು ಮಾಜಿ ಮುಖ್ಯಮಂತ್ರಿ ಬೆನ್ನು ಬಿದ್ದಿದ್ದಾರೆ.ಅಂತಿಮವಾಗಿ ಇಬ್ಬರಿಗೆ ಮಾತ್ರ ಅವಕಾಶ ದೊರೆಯಲಿದೆ. ಹೀಗಾಗಿ ಸಂಪುಟಕ್ಕೆ ಸೇರ್ಪಡೆಯಾಗುವ ಆ ಇಬ್ಬರು ಶಾಸಕರು ಯಾರು ಎಂಬುದು ಇದೀಗ ಕಾಂಗ್ರೆಸ್ ವಲಯದಲ್ಲಿ ಕುತೂಹಲ ಮೂಡಿಸಿದೆ.

## ರೇಬೀಸ್ ರೋಗ ತಡೆಗಟ್ಟಲು ಜಾಗೃತಿ

ಅ.ಶ. ಸುದ್ದಿ ಕುಷ್ಟಗಿ

**ಕುಷ್ಟಗಿ: ತಾಲೂಕಿನ ಹಿರೇಮನ್ನಾಪುರದಲ್ಲಿ ನಡೆದ ರೇಬೀಸ್ ಮಾರಣಾಂತಿಕ ಕಾಯಿಲೆಯಾಗಿದ್ದು, ಸಾಮಾನ್ಯವಾಗಿ ಸೋಂಕಿತ ನಾಯಿ ಸೇರಿದಂತೆ ಪ್ರಾಣಿಗಳ ಕಡಿತದಿಂದ ಮನುಷ್ಯರಿಗೆ ಹರಡುತ್ತದೆ. ರೇಬೀಸ್‌ನಿಂದ ಸಂಭವಿಸುವ ಸಾವುಗಳನ್ನು ತಡೆಗಟ್ಟಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಹಾಗೂ ಸಾಕುಪ್ರಾಣಿಗಳಿಗೆ ನಿಯಮಿತವಾಗಿ ಲಸಿಕೆ ಹಾಕಿಸುವುದು ಅಗತ್ಯ ಎಂದು ಹಿರಿಯ ಪಶುವೈದ್ಯಾಧಿಕಾರಿ ಡಾ. ಸಿದ್ಧಲಿಂಗಯ್ಯ ಶಂಕೀನ್ ಹೇಳಿದರು.**



ಸೆ.28ರ ವಿಶ್ವ ರೇಬೀಸ್ ದಿನಾಚರಣೆ ಅಂಗವಾಗಿ ಹಿರೇಮನ್ನಾಪುರ ಗ್ರಾಮದ ಮಹರ್ಷಿ ವಾಲ್ಮೀಕಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ರೇಬೀಸ್ ರೋಗದ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮ ಹಾಗೂ ಜಾಥಾ ಹಮ್ಮಿಕೊಳ್ಳಲಾಯಿತು. ಇದೇ ಸಂದರ್ಭದಲ್ಲಿ ಸಾಕು ನಾಯಿಗಳು ಮತ್ತು ಬೆಕ್ಕುಗಳಿಗೆ ಉಚಿತ ರೇಬೀಸ್ ಲಸಿಕೆ ಹಾಕುವ ಕಾರ್ಯಕ್ರಮವನ್ನು ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ವತಿಯಿಂದ ಡಾ. ಸಿದ್ಧಲಿಂಗಯ್ಯ ಶಂಕೀನ್ ಅವರ ನೇತೃತ್ವದಲ್ಲಿ ನಡೆಸಲಾಯಿತು. ನಾಯಿ ಅಥವಾ ಇತರ ಪ್ರಾಣಿಗಳು ಕಚ್ಚಿದ ಸಂದರ್ಭದಲ್ಲಿ ಗಾಯವನ್ನು ತಕ್ಷಣ ಸೋಪು ಹಾಗೂ ಶುದ್ಧ ನೀರಿನಿಂದ ಚೆನ್ನಾಗಿ ತೊಳೆಯಬೇಕು. ಬಳಿಕ ಯಾವುದೇ ವಿಳಂಬ ಮಾಡದೆ ಆಸ್ಪತ್ರೆಗೆ ತೆರಳಿ ವೈದ್ಯರ ಸಲಹೆಯಂತೆ ರೇಬೀಸ್ ನಿರೋಧಕ ಲಸಿಕೆ ಪಡೆಯಬೇಕು. ಗಾಯಕ್ಕೆ ಸುಣ್ಣ ಹಚ್ಚುವುದು, ದಾರ ಕಟ್ಟುವುದು ಅಥವಾ ಬಟ್ಟೆಯಿಂದ ಬಿಗಿಯಾಗಿ ಬ್ಯಾಂಡೇಜ್ ಮಾಡುವುದು ಮಾಡಬಾರದು ಎಂದು ಡಾ. ಶಂಕೀನ್ ಸಲಹೆ ನೀಡಿದರು. ರೇಬೀಸ್ ರೋಗದ ಲಕ್ಷಣಗಳು ಕಾಣಿಸಿಕೊಂಡ ನಂತರ ಚಿಕಿತ್ಸೆ ನೀಡುವುದು ಅತ್ಯಂತ ಕಷ್ಟಕರವಾಗಿರುವುದರಿಂದ, ಪ್ರಾಣಿ ಕಚ್ಚಿದ ಕೂಡಲೇ ವೈದ್ಯಕೀಯ ಸಲಹೆ ಪಡೆಯುವುದು ಅತ್ಯಗತ್ಯ. ವೈದ್ಯರು ಸೂಚಿಸುವ ವೇಳಾಪಟ್ಟಿಯಂತೆ ಲಸಿಕೆಯ ಎಲ್ಲಾ ಡೋಸ್‌ಗಳನ್ನು ಕಡ್ಡಾಯವಾಗಿ ಪಡೆಯಬೇಕು ಎಂದು ಅವರು ತಿಳಿಸಿದರು. ಸಾಕು ನಾಯಿ ಮತ್ತು ಬೆಕ್ಕುಗಳಿಗೆ ಸೆಪ್ಟೆಂಬರ್ ಹಾಗೂ ಅಕ್ಟೋಬರ್ ತಿಂಗಳಲ್ಲಿ ಉಚಿತವಾಗಿ ರೇಬೀಸ್ ಲಸಿಕೆ ನೀಡಲಾಗುತ್ತಿದ್ದು, ಸಾರ್ವಜನಿಕರು ಸಮೀಪದ ಪಶುವೈದ್ಯಕೀಯ ಸಂಸ್ಥೆಗಳಿಗೆ ತೆರಳಿ ತಮ್ಮ ಸಾಕುಪ್ರಾಣಿಗಳಿಗೆ ಲಸಿಕೆ ಹಾಕಿಸಿಕೊಳ್ಳಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಮಹರ್ಷಿ ವಾಲ್ಮೀಕಿ ಶಾಲೆಯ ಅಧ್ಯಕ್ಷ ಗುರುರಾಜ್ ಸುಬೇದಾರ್, ಪಶುಪಾಲನಾ ಇಲಾಖೆಯ ಸೌಮ್ಯ ಪಟ್ಟಣಶೆಟ್ಟಿ, ವೀರೇಶ್, ಶಾಲೆಯ ಮುಖ್ಯೋಪಾಧ್ಯಾಯ ಮುತ್ತಣ್ಣ ಗೊರವರ, ಎಚ್.ಕೆ. ವಾಲ್ಮೀಕಿ, ರಾಮಣ್ಣ ಆರತಿ, ಸಾಕುಪ್ರಾಣಿ ಪ್ರಿಯರು ಹಾಗೂ ಶಾಲಾ ಮಕ್ಕಳು ಭಾಗವಹಿಸಿದ್ದರು.

ಅಜಾತ ಶತ್ರು
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

# ಕಲ್ಲಿದ್ದಲು ಹಗರಣಕ್ಕಿಂತ ದೊಡ್ಡದು ನೈಸ್ ಹಗರಣ : ದಾಖಲೆ ಸಮೇತ ಹೆಚ್ಡಿಕೆ ಆರೋಪ







ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ನೈಸ್ ಯೋಜನೆ ದೇಶದ 2ಜಿ ಸ್ಪೆಕ್ಟ್ರಮ್, ಕಲ್ಲಿದ್ದಲು ಹಗರಣಕ್ಕಿಂತ ದೊಡ್ಡದು ಎಂದು ಕೇಂದ್ರ ಕೈಗಾರಿಕಾ ಸಚಿವ ಹಾಗೂ ಜೆಡಿ–ಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ನೇರ ಆರೋಪ ಮಾಡಿದ್ದಾರೆ. ಖಾಸಗಿ ಹೋಟೇಲ್‌ನಲ್ಲಿಂದು ನಡೆದ ಸುದೀರ್ಘ ಸುದ್ದಿಗೋಷ್ಠಿಯಲ್ಲಿ ದಾಖಲೆಗಳನ್ನು ಎಳೆ ಎಳೆಯಾಗಿ ಬಿಚ್ಚಿಟ್ಟ ಎಚ್‌ಡಿಕೆ, ನೈಸ್ ಯೋಜನೆಯ ಮೂಲವೇ ಬೇರೆ.**

ಒಪ್ಪಂದವಾಗಿದ್ದೇ ಬೇರೆ ಎಂದು ಹೇಳಿದ್ದಾರೆ. ನೈಸ್ ಯೋಜನೆಗೂ ದೇವೇಗೌಡರು ಅಂದು ಸಹಿ ಹಾಕಿದ್ದಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ದಾಖಲೆ ಸಮೇತ ಅವರು ಬಿಡುಗಡೆ ಮಾಡಿದ್ದಾರೆ. ಬೇಕಿದ್ದರೆ ರಾಜ್ಯ ಸರ್ಕಾರ ವಿಧಾನಸೌಧದ ಮೆಟ್ಟಿಲ ಮೇಲೆ ಇದರ ಬಗ್ಗೆ ಚರ್ಚೆ ಮಾಡಲಿ. ಅದಕ್ಕೆ ನಾನು ಸಿದ್ಧ ಎಂದು ನೇರವಾಗಿ ಸಿಎಂಗೆ ಪಂಥಾಹ್ವಾನ ನೀಡಿದ್ದಾರೆ.

ನೈಸ್ ಯೋಜನೆ ದೇವೇಗೌಡರು, ಕುಮಾರಸ್ವಾಮಿ ಅವರ ಕೂಸು ಎಂದು ಹೇಳುತ್ತಿದ್ದಾರೆ. ಈ ಬಗ್ಗೆ ನೇರ ಚರ್ಚೆಗೆ ನಾನು ಸಿದ್ಧ ಎಂದು ಸವಾಲು ಹಾಕಿದ್ದಾರೆ.ಈಗಾಗಲೇ ನ್ಯಾಯಾಲಯ ನೈಸ್ ಯೋಜನೆ ಕುರಿತಂತೆ ಹಲವಾರು ಲೋಪಗಳನ್ನು ಗಮನಿಸಿದೆ. ಕಳೆದ 1995ರಲ್ಲಿ ನೈಸ್ ಯೋಜನೆ ಕುರಿತಂತೆ ಎಲ್ಲ ವಿವರಗಳನ್ನೂ ಕುಮಾರಸ್ವಾಮಿ ಅವರು ಇಂದಿಲ್ಲಿ ಬಹಿರಂಗಪಡಿಸಿದ್ದಾರೆ. ಮೊದಲು ನೈಸ್ ಕಂಪೆನಿ ಇರಲಿಲ್ಲ. ವಿಹೆಚ್‌ಬಿ, ಕಲ್ಯಾಣಿ ಗ್ರೂಪ್ ಆಫ್ ಕಂಪೆನಿ, ಸ್ಲ್ಯಾಬ್ ಎಂಜಿನಿಯರಿಂಗ್ ಕಂಪೆನಿ ಜತೆ ದೇವೇಗೌಡರು ಸಹಿ ಹಾಕಿದ್ದರು.

ಫೆ.20ರ 1995ರಲ್ಲಿ ಈ ಒಪ್ಪಂದ ಆಗಿತ್ತು. ಆಗಿನ ಮೇ ತಿಂಗಳಲ್ಲೇ ಈ ಕಂಪೆನಿ ಹಲವಾರು ಪತ್ರ ವ್ಯವಹಾರ ಮಾಡಿತ್ತು. ನಂತರ ಭೂಮಿ ಸ್ವಾಧೀನ ಕುರಿತಂತೆ ಡಿಪಿಆರ್ ಮತ್ತು ಲಾಭ–ನಷ್ಟದ ಬಗ್ಗೆ ಚರ್ಚೆಯೂ ನಡೆದಿತ್ತು. 8–11–1995ರಲ್ಲಿ ಸಚಿವ ಸಂಪುಟ ಒಪ್ಪಿಗೆ ನೀಡಿತ್ತು. 30 ವರ್ಷ ಟೋಲ್ ಸಂಗ್ರಹಕ್ಕೆ ಅವಕಾಶ ನೀಡಲಾಗಿತ್ತು. ಭೂಮಿ ಸ್ವಾಧೀನ ವೆಚ್ಚವನ್ನು ಅವರೇ ಭರಿಸಬೇಕು ಎಂಬ ನಿಯಮಾನುಸಾರ ಅನುಮತಿ ನೀಡಲಾಗಿತ್ತು. ನಂತರ ಜೆ.ಎಚ್.ಪಟೇಲ್ ಅವರು ಮುಖ್ಯಮಂತ್ರಿಯಾಗಿದ್ದಾಗ ಬೆಂಗಳೂರು–ಮೈಸೂರು ಎಕ್?ಸಪ್ರೆಸ್ ಯೋಜನೆಗೆ ಭಾರತ್ ಫೋರ್ ಲಿಮಿಟೆಡ್‌ಗೆ 1997ರಲ್ಲಿ ಮಂಜೂರಾತಿ ನೀಡಿದ್ದರು. ಆಗ ಕೂಡ ಇನ್ನೂ ನೈಸ್ ಬಂದಿರಲಿಲ್ಲ.

3–4–1997ರಲ್ಲಿ ಈ ಬಗ್ಗೆ ಅಗ್ರಿಮೆಂಟ್ ಕೂಡ ಆಯಿತು. ಆಗ ಡಿಪಿಆರ್‌ನಲ್ಲಿ ಫಲವತ್ತಾದ ಯಾವುದೇ ಭೂಮಿಯನ್ನು ಕೂಡ ಗುರುತಿಸಿರಲಿಲ್ಲ ಎಂದು ಅವರು ಹೇಳಿದ್ದಾರೆ. ಯೋಜನೆಗಾಗಿ ಉತ್ತಮ ಕೃಷಿ ಭೂಮಿಯನ್ನು ಗುರುತಿಸದೆ, ಬರಡು ಭೂಮಿಯನ್ನು ಬಳಸಬೇಕೆಂಬ ನಿಯಮವಿತ್ತು. ರಸ್ತೆ ಕಾಮಗಾರಿಗೆ 6,999 ಎಕರೆ ಭೂಮಿಗೆ ಬದ್ಧತೆ ಮಾಡಲಾಗಿತ್ತು. ಫ್ರೇಮ್‌ವರ್ಕ್ ಒಪ್ಪಂದ ಮಾಡಿಕೊಂಡು ಯಾವುದೇ ನಿಯಮ ಉಲ್ಲಂಘಿಸಬಾರದು ಹಾಗೂ ಕೆರೆಗಳನ್ನು ಮುಟ್ಟಬಾರದು ಎಂಬ ಷರತ್ತುಗಳಿದ್ದವು ಎಂದು ವಿವರಿಸಿದರು. 1998ರಲ್ಲಿ ವಿದೇಶಿ ಕಂಪನಿ ಯೋಜನೆಯಿಂದ ಹಿಂದೆ ಸರಿದ ಬಳಿಕ ನೈಸ್ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಯಿತು.

2002ರ ಆಗಸ್ಟ್ ನಲ್ಲಿ ನಂದಿ ಎಕನಾಮಿಕ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿಮಿಟೆಡ್ ಹೆಸರಿನಲ್ಲಿ ಮತ್ತೊಂದು ಒಪ್ಪಂದ ಮಾಡಿಕೊಳ್ಳಲಾಯಿತು. ಬಳಿಕ ಬೆಂಗಳೂರು–ಮೈಸೂರು ಮೂಲಸೌಕರ್ಯ ಕಾರಿಡಾರ್ ಯೋಜನೆಗೆ ಪ್ರಾಧಿಕಾರ ರಚಿಸಲಾಯಿತು. ಆ ಸಂದರ್ಭದಲ್ಲಿ ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದು, ಡಿ.ಕೆ. ಶಿವಕುಮಾರ್ ನಗರಾಭಿವೃದ್ಧಿ ಸಚಿವರಾಗಿದ್ದರು ಎಂದು ಅವರು ಹೇಳಿದರು. ಯೋಜನೆಯ ಮೂಲ ಒಪ್ಪಂದಕ್ಕೆ ವಿರುದ್ಧವಾಗಿ ನಂತರದ ಹಂತಗಳಲ್ಲಿ ಬದಲಾವಣೆಗಳನ್ನು ಮಾಡಲಾಗಿದೆ.

# ದಿನಕ್ಕೆ 5 ಗ್ರಾಂಗಿಂತ ಕಡಿಮೆ ಉಪ್ಪು ಸೇವಿಸಿ : ಆರೋಗ್ಯದ ದೃಷ್ಟಿಯಿಂದ ಹೊಸ ಮಾರ್ಗಸೂಚಿ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ರಾಜ್ಯದಲ್ಲಿ ದಿನೇ ದಿನೇ ಏರಿಕೆಯಾಗುತ್ತಿರುವ ರಕ್ತದೊತ್ತಡ(ಬಿಪಿ) ಹಾಗೂ ಸಣ್ಣ ವಯಸ್ಸಿನಲ್ಲೇ ಸಂಭವಿಸುತ್ತಿರುವ ಹೃದಯಾಘಾತ ಪ್ರಕರಣಗಳಿಗೆ ಕಡಿವಾಣ ಹಾಕಲು ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಹತ್ವದ ಹೆಜ್ಜೆ ಇಟ್ಟಿದೆ. ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಉಪ್ಪು ಬಳಕೆ ಮತ್ತು ಸೇವನೆಯನ್ನು ನಿಯಂತ್ರಿಸಲು ಸಮಗ್ರ ನೂತನ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದೆ.**

ಇತ್ತೀಚಿನ ವರ್ಷಗಳಲ್ಲಿ ಯುವಜನತೆಯಲ್ಲೂ ಹೃದಯಾಘಾತ ಮತ್ತು ಪಾರ್ಶ್ವವಾಯು ಪ್ರಕರಣಗಳು ಹೆಚ್ಚಾಗುತ್ತಿರುವುದಕ್ಕೆ ಬದಲಾದ ಜೀವನಶೈಲಿ ಮತ್ತು ಸಂಸ್ಕರಿಸಿದ ಆಹಾರಗಳಲ್ಲಿನ ಅತಿಯಾದ ಉಪ್ಪಿನ (ಸೋಡಿಯಂ) ಅಂಶವೇ ಪ್ರಮುಖ ಕಾರಣ ಎಂಬುದು ವೈದ್ಯಕೀಯ ಅಧ್ಯಯನಗಳಿಂದ ತಿಳಿದುಬಂದಿದೆ. ಈ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆಯು ಸಾಮಾನ್ಯ ಸಾರ್ವಜನಿಕರಿಂದ ಹಿಡಿದು ಶಾಲೆಗಳು, ಹೋಟೆಲ್‌ಗಳು ಹಾಗೂ ಆಹಾರ ತಯಾರಿಕಾ ಸಂಸ್ಥೆಗಳಿಗೆ ಕಡ್ಡಾಯವಾಗಿ ಪಾಲಿಸಬೇಕಾದ ನಿಯಮಾವಳಿಗಳನ್ನು ಪ್ರಕಟಿಸಿದೆ.

ಸಾರ್ವಜನಿಕರಿಗೆ ವೈಯಕ್ತಿಕ ಜಾಗೃತಿ ಒಬ್ಬ ವ್ಯಕ್ತಿ ದಿನಕ್ಕೆ 5 ಗ್ರಾಂ ಗಿಂತ ಕಡಿಮೆ ಉಪ್ಪನ್ನು ಮಾತ್ರ ಸೇವಿಸಬೇಕು, ಊಟ ಮಾಡುವಾಗ ರುಚಿ ನೋಡದೆ ಮೇಲಿಂದ ಉಪ್ಪು ಹಾಕಿಕೊಳ್ಳುವ ಅಭ್ಯಾಸ ಬಿಡಬೇಕು.

ಅಡುಗೆಯಲ್ಲಿ ಹಾಗೂ ಉಪ್ಪಿನಕಾಯಿ, ಚಟ್ನಿ, ಸ್ನಾಕ್ಸ್ ತಯಾರಿಕೆಯಲ್ಲಿ ಉಪ್ಪಿನ ಪ್ರಮಾಣ ಕಡಿಮೆ ಇರಲಿ, ಸಂಸ್ಕರಿಸಿದ ಮತ್ತು ರೆಡಿ–ಟು–ಈಟ್ ಆಹಾರ ಕೊಳ್ಳುವಾಗ ಲೇಬಲ್‌ನಲ್ಲಿರುವ ಸೋಡಿಯಂ ಅಂಶವನ್ನು ಪರಿಶೀಲಿಸಿ ಖರೀದಿಸಬೇಕು, ಪೋಷಕರು ಚಿಕ್ಕ ವಯಸ್ಸಿನಿಂದಲೇ ಮಕ್ಕಳಿಗೆ ಕಡಿಮೆ ಉಪ್ಪು ಬಳಕೆಯ ಆಹಾರದ ಅಭ್ಯಾಸ ಬೆಳೆಸಬೇಕು, ಬಿಪಿ ಅಥವಾ ಕಿಡ್ನಿ ತೊಂದರೆ ಇರುವವರು ಉಪ್ಪನ್ನು ಬಳಸುವ ಮುನ್ನ ಕಡ್ಡಾಯವಾಗಿ ವೈದ್ಯರ ಸಲಹೆ ಪಡೆಯಬೇಕು ಎಂದು ಸಲಹೆ ಮಾಡಿದೆ.

ಹೋಟೆಲ್, ರೆಸ್ಟೋರೆಂಟ್ ಹಾಗೂ ಸ್ಟ್ರೀಟ್ ಫುಡ್ ಮಾರಾಟಗಾರರಿಗೆ ಗ್ರಾಹಕರ ಮೇಜಿನ ಮೇಲೆ(ಡೈನಿಂಗ್ ಟೇಬಲ್) ನೇರವಾಗಿ ಉಪ್ಪಿನ ಡಬ್ಬಿ ಇಡುವ ಪದ್ಧತಿಯನ್ನು ಬಿಡಬೇಕು, ಅಡುಗೆಯಲ್ಲಿ ಹಂತ–ಹಂತವಾಗಿ ಉಪ್ಪಿನ ಪ್ರಮಾಣವನ್ನು ಕಡಿಮೆ



ಮಾಡುವ ಪ್ರಮಾಣಿತ ಪದ್ಧತಿ ಅಳವಡಿಸಿಕೊಳ್ಳಬೇಕು ಹಾಗೂ ಅಡುಗೆಯವರಿಗೆ ಈ ಬಗ್ಗೆ ಸೂಕ್ತ ತರಬೇತಿ ನೀಡಬೇಕು, ಗ್ರಾಹಕರಿಗೆ ಜಾಗೃತಿ ಮೂಡಿಸಲು ಉಪ್ಪು ಕಡಿಮೆ ಬಳಸಿ ಎಂಬ ಸಂದೇಶಗಳನ್ನು ಪ್ರದರ್ಶಿಸಬೇಕು. ಶಾಲೆ ಮತ್ತು ಕಾಲೇಜುಗಳಿಗೆ ನೀಡುವ ಮಧ್ಯಾಹ್ನದ ಬಿಸಿಊಟ ಹಾಗೂ ಕ್ಯಾಂಟೀನ್ ಸ್ನಾಕ್ಸ್ ನಲ್ಲಿ ಉಪ್ಪಿನ ಬಳಕೆಯನ್ನು ಕಡಿತಗೊಳಿಸಬೇಕು. ಶಾಲಾ ಆರೋಗ್ಯ ಕಾರ್ಯಕ್ರಮಗಳ ಮೂಲಕ ಮಕ್ಕಳು ಮತ್ತು ಪೋಷಕರಲ್ಲಿ ಜಾಗೃತಿ ಮೂಡಿಸಿ, ಮನೆಯಲ್ಲೂ ಕಡಿಮೆ ಉಪ್ಪಿನ ಆಹಾರ ಪದ್ಧತಿ ಬೆಳೆಸಲು ಪ್ರೇರೇಪಿಸಬೇಕು.

ಆಹಾರ ಮತ್ತು ಉಪ್ಪು ತಯಾರಿಕಾ ಸಂಸ್ಥೆಗಳಿಗೆ ಸೋಡಿಯಂ ಕಡಿತ: ಆಹಾರ ಪ್ಯಾಕೇಜ್?ಡ ತಯಾರಕರು ತಮ ಉತ್ಪನ್ನಗಳಲ್ಲಿ ಸೋಡಿಯಂ ಪ್ರಮಾಣವನ್ನುಹಂತ–ಹಂತವಾಗಿ ಕಡಿಮೆ ಮಾಡಬೇಕು. ಎಫ್.ಎಸ್.ಎಸ್.ಎ.ಐ ಮಾನದಂಡ: ಎಲ್ಲಾ ಉಪ್ಪು ತಯಾರಕರು ಎಫ್‌ಎಸ್‌ಎಸ್–ಎಐ ಮಾನದಂಡಗಳಿಗೆ ಬದ್ಧರಾಗಿರಬೇಕು ಹಾಗೂ ಲೇಬಲ್‌ನಲ್ಲಿ ಪೌಷ್ಟಿಕಾಂಶ ಮತ್ತು ಮುನ್ನೆಚ್ಚರಿಕಾ ಮಾಹಿತಿಯನ್ನು ಸ್ಪಷ್ಟವಾಗಿ ನಮೂದಿಸಬೇಕು. ರಾಜ್ಯದಲ್ಲಿ ಉಪ್ಪಿನ ಅತಿಯಾದ ಬಳಕೆಯಿಂದ ಉಂಟಾಗುತ್ತಿರುವ ಅಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಈ ಮಾರ್ಗಸೂಚಿ ಪ್ರಮುಖ ಪಾತ್ರವಹಿಸಲಿದ್ದು, ಪ್ರತಿಯೊಬ್ಬ ನಾಗರಿಕರು ಇದನ್ನು ತಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಆರೋಗ್ಯ ಇಲಾಖೆ ಮನವಿ ಮಾಡಿದೆ.

ಉಪ್ಪು ತಯಾರಕರಿಗೂ ಹೊಸ ಜವಾಬ್ದಾರಿ ಉಪ್ಪು ಉತ್ಪಾದನಾ ಘಟಕಗಳು ಕಡಿಮೆ ಸೋಡಿಯಂ ಹೊಂದಿರುವ ಅಥವಾ ಐಯೋಡೈಸ್ಡ್ ಲೋ–ಸೋಡಿಯಂ ಉಪ್ಪು ಉತ್ಪಾದನೆಗೆ ಮುಂದಾಗಬೇಕು ಎಂದು ಇಲಾಖೆ ಸಲಹೆ ನೀಡಿದೆ. ಇಂತಹ ಉತ್ಪನ್ನಗಳು ಆಹಾರ ಸುರಕ್ಷತಾ ಮಾನದಂಡಗಳಿಗೆ ಅನುಗುಣವಾಗಿರಬೇಕು. ಉತ್ಪನ್ನದ ಸಂಯೋಜನೆ, ಬಳಕೆ ವಿಧಾನ ಹಾಗೂ ಮುನ್ನೆಚ್ಚರಿಕೆಗಳನ್ನು ಲೇಬಲ್‌ನಲ್ಲಿ ಸ್ಪಷ್ಟವಾಗಿ ನಮೂದಿಸುವಂತೆ ಸೂಚಿಸಲಾಗಿದೆ.

ಕಡಿಮೆ ಸೋಡಿಯಂ ಉಪ್ಪಿನ ಪರ್ಯಾಯಗಳಿಗೆ ಸಂಬಂಧಿಸಿದ ಮಾನದಂಡಗಳನ್ನು ಈಗಾಗಲೇ ರೂಪಿಸಲಾಗಿದೆ. 2017ರಲ್ಲೇ ಉಪ್ಪಿನ ಪರ್ಯಾಯಗಳು ಮತ್ತು ಕಡಿಮೆ/ಅತಿ ಕಡಿಮೆ ಸೋಡಿಯಂ ಹೊಂದಿರುವ ವಿಶೇಷ ಆಹಾರಗಳ ಗುಣಮಟ್ಟ ಹಾಗೂ ಲೇಬಲಿಂಗ್‌ಗೆ ಸಂಬಂಧಿಸಿದ ನಿಯಮಗಳನ್ನು ಎಫ್.ಎಸ್.ಎಸ್.ಎ.ಐ ಅಧಿಸೂಚಿಸಿತ್ತು. ಆದರೆ ಕಡಿಮೆ ಸೋಡಿಯಂ ಉಪ್ಪನ್ನು ಎಲ್ಲರೂ ಸ್ವತಂತ್ರವಾಗಿ ಬಳಸಬೇಕು ಎಂದರ್ಥವಲ್ಲ. ವಿಶೇಷವಾಗಿ ಕಿಡ್ನಿ ಸಮಸ್ಯೆ ಸೇರಿದಂತೆ ಕೆಲವು ಆರೋಗ್ಯ ಪರಿಸ್ಥಿತಿಗಳಲ್ಲಿ ಪೊಟ್ಯಾಸಿಯಂ ಒಳಗೊಂಡ ಉಪ್ಪಿನ ಪರ್ಯಾಯಗಳು ಸೂಕ್ತವಾಗಿರದಿರಬಹುದು. ಆದ್ದರಿಂದ ಇಂತಹ ಪರ್ಯಾಯಗಳನ್ನು ಬಳಸುವ ಮೊದಲು ವೈದ್ಯಕೀಯ ಸಲಹೆ ಪಡೆಯುವಂತೆ ಸೂಚಿಸಲಾಗಿದೆ.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka